# ಗೇರು ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ



भाकृअनुप
ICAR

**भा.कृ.अनु.प. – काजू अनुसंधान निदेशालय**

**ಭಾ.ಕೃ.ಸಂ.ಪ. - ಗೇರು ಸಂಶೋಧನಾ ನಿರ್ದೇಶನಾಲಯ**

ಪುತ್ತೂರು - 574 202, ಕರ್ನಾಟಕ, ಭಾರತ

काअनि
DCR

# ಗೇರು ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ


ಎಂ.ಜಿ. ನಾಯಕ್

ಮುರಳೀಧರ ಬಿ.ಎಂ.

ಶಂಸುದ್ದೀನ್ ಮಂಗಲಸೇರಿ

ಪ್ರೀತಿ. ಪಿ.



ಧನ ಸಹಾಯ:

ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ, ಕರ್ನಾಟಕ ಸರ್ಕಾರ

**ಮೇ 2020**

भा.कृ.अनु.प. – काजू अनुसंधान निदेशालय

ಭಾ.ಕೃ.ಸಂ.ಪ. - ಗೇರು ಸಂಶೋಧನಾ ನಿರ್ದೇಶನಾಲಯ

ಪುತ್ತೂರು - 574 202, ಕರ್ನಾಟಕ, ಭಾರತ

**ಉಲ್ಲೇಖ:**
ನಾಯಕ್, ಎಂ.ಜಿ., ಮುರಳೀಧರ, ಬಿ.ಎಂ., ಶಂಸುದ್ದೀನ್ ಮಂಗಲಸೇರಿ, ಮತ್ತು ಪ್ರೀತಿ, ಪಿ., 2020, ಗೇರು ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ, ತಾಂತ್ರಿಕ ಕೈಪಿಡಿ ಸಂಖ್ಯೆ, 32, ಐಸಿಎಆರ್ - ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು, ಕರ್ನಾಟಕ, ಭಾರತ, P. 30.

**ಸ್ವೀಕೃತಿ:**
**ಈ ಪ್ರಕಟಣೆಯನ್ನು ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ ಕರ್ನಾಟಕ ಸರ್ಕಾರದ ಧನಸಹಾಯದಿಂದ ಪ್ರಕಟಿಸಲಾಗಿದೆ.**

**ಪ್ರಕಟಿಸಿದವರು:**
**ಡಾ. ಎಂ.ಜಿ. ನಾಯಕ್**
ನಿರ್ದೇಶಕರು
ಐಸಿಎಆರ್-ಗೇರು ಸಂಶೋಧನಾ ನಿರ್ದೇಶನಾಲಯ
ಪುತ್ತೂರು - 574 202, ದ.ಕ. ಕರ್ನಾಟಕ

ಮೇ, 2020

**ಮುದ್ರಣ:**
ಕೋಡ್‌ವರ್ಡ್ ಪ್ರೊಸೆಸ್ ಅಂಡ್ ಪ್ರಿಂಟರ್ಸ್, ಯೆಯ್ಯಾಡಿ, ಮಂಗಳೂರು - 575 008
ಫೋನ್ : 9900100818, 9845084818
ಇ-ಮೇಲ್: codeword.process@gmail.com

# ಮುನ್ನುಡಿ

ಗೇರು ಬೆಳೆಯು ಬ್ರೆಜಿಲ್ ಮೂಲದ ಬೆಳೆಯಾಗಿದ್ದು, 16ನೇ ಶತಮಾನದಲ್ಲಿ ಪೋರ್ಚುಗೀಸ್ ಪ್ರಯಾಣಿಕರು ಭಾರತಕ್ಕೆ ಪರಿಚಯಿಸಿದರು. ಆರಂಭಿಕ ಅವಧಿಯಲ್ಲಿ ಕಾಡಿನ ಉತ್ಪತ್ತಿಯಾಗಿದ್ದು, ಇದನ್ನು ಮಣ್ಣಿನ ಸಂರಕ್ಷಣೆ ಮತ್ತು ಅರಣ್ಯೀಕರಣದ ಉದ್ದೇಶಕ್ಕಾಗಿ ಮಾತ್ರ ಬೆಳೆಸಲಾಯಿತು. ಅನಂತರ, ರೈತರು ಇದನ್ನು ಇತರ ಹೆಚ್ಚಿನ ಮೌಲ್ಯದ ಬೆಳೆಗಳಿಗೆ ಸೂಕ್ತವಲ್ಲದ ಭೂಮಿಯಲ್ಲಿ ಬೆಳೆಯಲು ಪ್ರಾರಂಭಿಸಿದರು. ತದನಂತರದಲ್ಲಿ ಅದರ ವಾಣಿಜ್ಯ ಪ್ರಾಮುಖ್ಯತೆಯನ್ನು ಕಂಡುಹಿಡಿಯಲಾಯಿತು ಮತ್ತು ಇದು ರಫ್ತು ಆಧಾರಿತ ವಾಣಿಜ್ಯ ಬೆಳೆಯ ಸ್ಥಾನಮಾನವನ್ನು ಪಡೆಯಿತು. ಗೇರು ಉತ್ಪಾದನೆಯಲ್ಲಿ ಭಾರತ ಮುಂಚೂಣಿಯಲ್ಲಿದ್ದರೂ, ಭಾರತೀಯ ಉತ್ಪಾದಕತೆಯು ಇತರೆ ಉತ್ಪಾದಕ ರಾಷ್ಟ್ರಗಳಿಗಿಂತ ತೀರಾ ಕಡಿಮೆ. ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಿಂದ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ದೇಶದಲ್ಲಿ ಗೇರು ಬೆಳೆಯ ಉತ್ಪಾದಕತೆಯನ್ನು ಹೆಚ್ಚಿಸಬೇಕಿದೆ. ಕಡಿಮೆ ಉತ್ಪಾದಕತೆಗೆ ಸಂಬಂಧಿಸಿದಂತೆ ಹಲವಾರು ಕಾರಣಗಳಿದ್ದು, ಮಣ್ಣಿನ ಫಲವತ್ತತೆ ಕುಂಟಿತವಾಗಿರುವುದು ಒಂದು ಪ್ರಮುಖ ಅಂಶವಾಗಿದೆ. ಮಣ್ಣಿನ ಫಲವತ್ತತೆಯನ್ನು ವೃದ್ಧಿಸುವುದರಿಂದ ಗೇರಿನ ಉತ್ಪಾದಕತೆಯನ್ನು ಹೆಚ್ಚಿಸಬಹುದಾಗಿದೆ.

ಗೇರಿನ ಕುರಿತು ಐಸಿಎಆರ್ ಗೇರು ಸಂಶೋಧನಾ ನಿರ್ದೇಶನಾಲಯ ಮತ್ತು ಎಐಸಿಆರ್‌ಪಿಯ ಸಮನ್ವಯ ಕೇಂದ್ರಗಳು ಗೇರಿನ ಪೋಷಕಾಂಶಗಳ ನಿರ್ವಹಣಾ ಸಮಸ್ಯೆಗಳನ್ನು ಪರಿಹರಿಸಲು ಅನೇಕ ಉಪಯುಕ್ತ ತಂತ್ರಜ್ಞಾನಗಳನ್ನು ಮತ್ತು ಶಿಫಾರಸ್ಸುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಾಂತ್ರಿಕ ಕೈಪಿಡಿಯು ಗೇರು ಬೆಳೆಯಲ್ಲಿನ ಪ್ರಮುಖ ಹಾಗೂ ಲಘು ಪೋಷಕಾಂಶಗಳ ನಿರ್ವಹಣೆ, ಮಣ್ಣಿನ ಮಾದರಿ ವಿಧಾನಗಳು ಹಾಗೂ ಸುಣ್ಣದ ಬಳಕೆಯ ವಿವಿಧ ಅಂಶಗಳನ್ನು ಒಳಗೊಂಡಿದೆ. ಎಲೆಗಳ ಮೇಲೆ ಕಂಡು ಬರುವ ಲಕ್ಷಣಗಳ ಆಧಾರದ ಮೇಲೆ ವಿವಿಧ ಪೋಷಕಾಂಶಗಳ ಕೊರತೆಯನ್ನು ಕಂಡುಹಿಡಿಯಲು ಈ ಕೈಪಿಡಿಯಲ್ಲಿ ಎಲೆಗಳ ಚಿತ್ರಗಳನ್ನು ಪ್ರತ್ಯೇಕ ಭಾಗದಲ್ಲಿ ನೀಡಲಾಗಿದೆ.

ಪೋಷಕಾಂಶಗಳ ಪ್ರಾಮುಖ್ಯತೆ ಮತ್ತು ಪೋಷಕಾಂಶಗಳ ಅನ್ವಯಕ್ಕೆ ವಿವಿಧ ಪರ್ಯಾಯಗಳ ಬಗ್ಗೆಯೂ ಚರ್ಚಿಸಲಾಗಿದೆ. ಗೇರಿನ ಒಣ ಎಲೆಗಳನ್ನು ಉಪಯೋಗಿಸಿ ಗೊಬ್ಬರ ತಯಾರಿಕೆಯ ವಿಧಾನವನ್ನು ಸಹ ಈ ಕೈಪಿಡಿಯಲ್ಲಿ ತಿಳಿಸಲಾಗಿದೆ. 'ಗೇರು ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ' ಎಂಬ ಶೀರ್ಷಿಕೆಯ ಈ ಕೈಪಿಡಿಯನ್ನು ಪ್ರಕಟಿಸಲು ರ ಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ ಧನ ಸಹಾಯ ನೀಡಿದೆ, ಇವರಿಗೆ ಧನ್ಯವಾದಗಳು.

ಎಂ.ಜಿ. ನಾಯಕ್
ಮುರಳೀಧರ ಬಿ.ಎಂ.
ಶಂಸುದ್ದೀನ್ ಮಂಗಲಸೇರಿ
ಪ್ರೀತಿ. ಪಿ.

ದಿನಾಂಕ : ಮೇ 26, 2020
ಸ್ಥಳ : ಪುತ್ತೂರು

# ಪರಿವಿಡಿ


| ಕ್ರ. ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | 1 |
| 2. | ಗೇರಿನ ಪರಿಚಯ | 1-4 |
| 3. | ಭಾರತದಲ್ಲಿ ಗೇರು ಬೆಳೆಯುವ ಪ್ರದೇಶಗಳ ಮಣ್ಣಿನ ಗುಣಲಕ್ಷಣಗಳು | 5 |
| 4. | ಗೇರಿನಲ್ಲಿ ಪೋಷಕಾಂಶಗಳ ಅವಶ್ಯಕತೆ | 5 |
| 5. | ಗೇರಿನಲ್ಲಿ ಪೋಷಕಾಂಶಗಳ ಕೊರತೆಯನ್ನು ನಿರ್ಣಯಿಸುವುದು | 5-15 |
| 6. | ಗೇರಿನಲ್ಲಿ ಪೋಷಕಾಂಶಗಳ ನಿರ್ವಹಣೆ | 16-25 |
| 7. | ಘನ ಸಾಂದ್ರತೆಯ ವ್ಯವಸ್ಥೆಯಲ್ಲಿ ರಸಗೊಬ್ಬರಗಳ ಪ್ರಮಾಣ | 25 |
| 8. | ಗೇರು ಬೆಳೆಯ ಜೈವಿಕ ಸಮೂಹದಿಂದ ಕಾಂಪೋಸ್ಟ್ ತಯಾರಿಕೆ | 25-26 |
| 9. | ಗೇರಿನಲ್ಲಿ ಸಾವಯವ ಕೃಷಿಯಡಿಯಲ್ಲಿ ಪೋಷಕಾಂಶಗಳ ನಿರ್ವಹಣೆ | 26-27 |
| 10. | ಗೇರಿನ ಪೋಷಕಾಂಶಗಳ ನಿರ್ವಹಣೆಯಲ್ಲಿ ಸಾಫ್ಟ್‌ವೇರ್ ಮತ್ತು ಮೊಬೈಲ್ ಅಪ್ಲಿಕೇಶನ್ | 27-29 |
| 11. | ಸಂದೇಶ | 29-30 |
| 12. | ಉಲ್ಲೇಖಗಳು | 30 |

# ಗೇರು ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆಯ ತಾಂತ್ರಿಕ ಕೈಪಿಡಿ

## 1. ಪೀಠಿಕೆ

ಮಣ್ಣು ಒಂದು ಪ್ರಮುಖ ನೈಸರ್ಗಿಕ ಸಂಪನ್ಮೂಲವಾಗಿದ್ದು, ಖನಿಜಗಳು, ಸಾವಯವ ವಸ್ತುಗಳು, ಗಾಳಿ ಮತ್ತು ನೀರಿನಿಂದ ಕೂಡಿರುತ್ತದೆ. ಭೂಮಿಯ ಮೇಲಿನ ಜೀವ ಸಂಕುಲವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಣ್ಣಿನ ಮೇಲೆ ಅವಲಂಬಿತವಾಗಿರುತ್ತವೆ. ಜೀವಿಗಳಿಗೆ ಆಹಾರವನ್ನು ನೀಡುವ ಪ್ರಮುಖ ಪಾತ್ರದ ಹೊರತಾಗಿಯು ನೀರು, ಪೋಷಕಾಂಶಗಳು ಮತ್ತು ಗಾಳಿಯನ್ನು ಮರುಬಳಕೆ ಮಾಡಲು ಸಹ ಮಣ್ಣು ಸಹಾಯ ಮಾಡುತ್ತದೆ. ಸಸ್ಯಗಳು ತಮ್ಮ ಹೆಚ್ಚಿನ ಪೋಷಕಾಂಶಗಳ ಅಗತ್ಯವನ್ನು ಮಣ್ಣಿನಿಂದ ಪೂರೈಸಿಕೊಳ್ಳುತ್ತವೆ. ಸಸ್ಯಗಳು ತಮ್ಮ ಜೀವನ ಚಕ್ರವನ್ನು ಪೂರ್ಣಗೊಳಿಸಲು ಅಗತ್ಯವಿರುವ 17 ಅಗತ್ಯ ಪೋಷಕಾಂಶಗಳಲ್ಲಿ 14 ಪೋಷಕಾಂಶಗಳು ಮಣ್ಣಿನಿಂದ ದೊರೆಯುತ್ತವೆ. ಪೋಷಕಾಂಶಗಳಿಂದ ಸಮೃದ್ಧವಾಗಿರುವ ಮಣ್ಣನ್ನು ಫಲವತ್ತಾದ ಮಣ್ಣು ಎಂದು ಪರಿಗಣಿಸಲಾಗುತ್ತದೆ. ಗಿಡಗಳು ತಮ್ಮ ಬೆಳವಣಿಗೆಗೆ ಪೂರಕವಾದ ಪೋಷಕಾಂಶಗಳನ್ನು ಮಣ್ಣಿನಿಂದ ನಿರಂತರ ವಾಗಿ ಹೀರಿಕೊಳ್ಳುತ್ತವೆ. ನೈಸರ್ಗಿಕವಾಗಿ ಬೇರು ಕೊಳೆಯುವುದರಿಂದ ಮತ್ತು ಗಿಡ ಮರಗಳ ಹುಟ್ಟು ಸಾವಿನ ನೈಸರ್ಗಿಕ ಪುನರಾವರ್ತನೆಯ ಮೂಲಕ ಪೋಷಕಾಂಶಗಳು ಮಣ್ಣಿಗೆ ಸೇರಿಕೊಳ್ಳುತ್ತವೆ ಮತ್ತು ಈ ನೈಸರ್ಗಿಕ ಪ್ರಕ್ರಿಯೆಗಳು ದೀರ್ಘಾವಧಿಯಾಗಿರುತ್ತದೆ. ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಆಧುನಿಕ ಕೃಷಿಯಿಂದಾಗಿ ಭೂಮಿಯಲ್ಲಿ ಲಭ್ಯವಿರುವ ಪೋಷಕಾಂಶಗಳು ನಿರಂತರವಾಗಿ ತೀವ್ರಗತಿಯಲ್ಲಿ ಸವಕಳಿಯಾಗುತ್ತಿರುವುದರಿಂದ ಬೆಳೆಗಳ ಉತ್ಪಾದಕತೆ ಹಾಗೂ ಗುಣಮಟ್ಟ ಕಳಪೆಯಾಗುತ್ತಿವೆ ಹಾಗೂ ಮಣ್ಣಿನ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಅವನತಿಯೆಡೆಗೆ ಸಾಗುತ್ತಿದೆ. ಅದರ ಅಂತರ್ಗತ ಹಾಗೂ ಕೊರತೆಯಾದ ಪೋಷಕಾಂಶಗಳನ್ನು ಮಣ್ಣಿಗೆ ಸೇರಿಸುವುದರಿಂದ ಇಳುವರಿಯು ಸುಸ್ಥಿರತೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಅಗತ್ಯಕ್ಕೆ ಅನುಗುಣವಾಗಿ ಸಮತೋಲನದ ನೀರು, ಸಾವಯವ ಗೊಬ್ಬರ ಮತ್ತು ರಸಗೊಬ್ಬರಗಳನ್ನು ನೀಡುವ ಮೂಲಕ ಈ ಸಮಸ್ಯೆಯನ್ನು ಸರಿಪಡಿಸಬಹುದಾಗಿದೆ.

ಗೇರಿನಲ್ಲಿ ಪೋಷಕಾಂಶಗಳ ನಿರ್ವಹಣೆಗೆ ಸರಿಯಾಗಿ ಗಮನ ನೀಡಲಾಗುತ್ತಿಲ್ಲ. ಪೋಷಕಾಂಶಗಳ ನಿರ್ವಹಣೆ ಎಂದರೆ ಮಣ್ಣಿನ ಫಲವತ್ತತೆ ಮತ್ತು ಬೆಳೆ ಉತ್ಪಾದಕತೆಯನ್ನು ಸುಧಾರಿಸಲು ಬಳಸುವ ವಿವಿಧ ಪೋಷಕಾಂಶಗಳು, ನೀಡುವ ಸಮಯ ಮತ್ತು ನೀಡುವ ವಿಧಾನವನ್ನು ನಿರ್ವಹಿಸುವ ಪ್ರಕ್ರಿಯೆಯಾಗಿದೆ. ಹಾಗೂ ಈ ಮೂಲಕ ಪೋಷಕಾಂಶಗಳ ನಷ್ಟವನ್ನು ಕಡಿಮೆ ಮಾಡಬಹುದಾಗಿದೆ. ಈ ತಾಂತ್ರಿಕ ಕೈಪಿಡಿಯಲ್ಲಿ ಗೇರು ಬೆಳೆಯ ಪೋಷಕಾಂಶಗಳ ನಿರ್ವಹಣೆಯಲ್ಲಿ ಬರುವ ವಿವಿಧ ಸಮಸ್ಯೆಗಳನ್ನು ವಿವರಿಸಲಾಗಿದೆ. ಬೆಳೆಯುತ್ತಿರುವ ಬೇಡಿಕೆಗಳನ್ನು ಪೂರೈಸಲು ಉತ್ಪಾದನೆಯನ್ನು ಹೆಚ್ಚಿಸಲು, ಕೃಷಿ ಭೂಮಿಯನ್ನು ಉಳಿಸಿಕೊಳ್ಳಲು ಹಾಗೂ ಭವಿಷ್ಯದ ಪೀಳಿಗೆಗೆ ಭೂಮಿಯ ಫಲವತ್ತತೆಯ ಮಟ್ಟವನ್ನು ಕಾಪಾಡಿಕೊಳ್ಳಲು ಗೇರಿನಲ್ಲಿ ರಸಗೊಬ್ಬರ ನಿರ್ವಹಣೆಯ ಮಹತ್ವವನ್ನು ವಿವರಿಸಲಾಗಿದೆ.

## 2. ಗೇರಿನ ಪರಿಚಯ

ಗೇರು ಬೆಳೆಯು (ಅನಾಕಾರ್ಡಿಯಮ್ ಆಕ್ಸಿಡೆಂಟಲೆ L.) ಮೂಲತಹ ಬ್ರೆಜಿಲ್ ದೇಶದ್ದಾಗಿದ್ದು, ಪೋರ್ಚುಗೀಸ್ ಪ್ರಯಾಣಿಕರು 16ನೇ ಶತಮಾನದಲ್ಲಿ ಕರಾವಳಿ ಪ್ರದೇಶದಲ್ಲಿ ಪರಿಚಯಿಸಿದರು. ತದನಂತರ ಕಾಲಕ್ರಮೇಣದಲ್ಲಿ ಇದನ್ನು ಮಣ್ಣಿನ ಸವೆತವನ್ನು ನಿಯಂತ್ರಿಸುವ ಬೆಳೆಯಾಗಿ ಭಾರತದಲ್ಲಿ ಉಪಯೋಗಿಸಲ್ಪಟ್ಟಿತು. ಶೀಘ್ರದಲ್ಲೇ ಅದರ ವಾಣಿಜ್ಯ ಪ್ರಾಮುಖ್ಯತೆ ಮತ್ತು ಪ್ರತಿಕೂಲವಾದ ಹವಾಮಾನ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಿಕೆಯನ್ನು ಗುರುತಿಸಲಾಯಿತು ಮತ್ತು ಅದರ ವಾಣಿಜ್ಯ ಪ್ರಾಮುಖ್ಯತೆಯಿಂದ ಅದರ ಬೇಸಾಯ ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯಲ್ಲಿ ಆರಂಭವಾಯಿತು. ಗೇರಿನ ತಿರುಳು / ಬೀಜ ಮತ್ತು ಸಿಪ್ಪೆಯಿಂದ ಬರುವ ಎಣ್ಣೆಯ (CNSL) ರಫ್ತು ದೇಶಕ್ಕೆ ವಿದೇಶಿ ವಿನಿಮಯವನ್ನು ಸೃಷ್ಟಿಸಿತು. ಭಾರತದಲ್ಲಿ ಗೇರನ್ನು ಮರಳು ಮಿಶ್ರಿತ ಕೆಂಪು ಮಣ್ಣು ಹಾಗೂ ಇನ್ನಿತರೆ ನೀರು ಬಸಿದುಹೋಗುವ ಗುಣವುಳ್ಳ ವಿವಿಧ ಪ್ರಕಾರದ ಮಣ್ಣಿನಲ್ಲಿ ಬೆಳೆಯಲಾಗುತ್ತದೆ. ಗೇರು ಬರ ಪರಿಸ್ಥಿತಿಗೆ ಹೊಂದಿಕೊಳ್ಳುವ ಬೆಳೆಯಾಗಿರುವುದರಿಂದ ಅವನತಿಗೊಳಗಾದ ಗುಡ್ಡಗಾಡುಗಳು ಬರಪೀಡಿತ ಪ್ರದೇಶಗಳು ಬರಡು ಭೂಮಿ ಮತ್ತು ಇಳಿಜಾರಿನ ಭೂಮಿಯಲ್ಲಿಯೂ ಸಹ ವ್ಯಾಪಕವಾಗಿ ಬೆಳೆಯಲಾಗುತ್ತದೆ. ಇತರ ಬೆಳೆಗಳ ಲಾಭದಾಯಕ ಉತ್ಪಾದನೆ ಸಾಧ್ಯವಿಲ್ಲದ ಜಾಗಗಳಲ್ಲಿ ಹಾಗೂ ಪೋಷಕಾಂಶಗಳ ಲಭ್ಯತೆ ಕಡಿಮೆ ಇರುವ ಪ್ರದೇಶಗಳಲ್ಲಿಯೂ ಕೂಡ ಗೇರನ್ನು ಬೆಳೆಯಲಾಗುತ್ತದೆ.

ಗೇರು ಹೆಚ್ಚಾಗಿ ಬೆಳೆಯುವ ಕರಾವಳಿ ಪ್ರದೇಶಗಳಲ್ಲಿ ಭಾರೀ ಮಳೆಯಾಗುವುದರಿಂದ, ಮೂಲ ಕ್ಯಾಟಯಾನ್‌ಗಳು ತೊಳೆದುಹೋಗುತ್ತವೆ ಮತ್ತು ಮಣ್ಣಿನಲ್ಲಿ ಆಮ್ಲೀಯತೆಯನ್ನು ಹೆಚ್ಚಿಸುತ್ತದೆ. ಹೆಚ್ಚಿನ ಮಣ್ಣಿನ ಆಮ್ಲೀಯತೆಯು ಗಿಡಗಳಿಗೆ ಪೋಷಕಾಂಶಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು (ಸಾಮರ್ಥ್ಯ) ಕಡಿಮೆ ಮಾಡುತ್ತದೆ, ಇದರಿಂದಾಗಿ ಕೆಲವು ಪೋಷಕಾಂಶಗಳು ಗಿಡಗಳಿಗೆ ಲಭ್ಯವಾಗುವುದಿಲ್ಲ.



**ಚಿತ್ರ 1. ಸಾಂಪ್ರದಾಯಿಕವಾಗಿ ಗೇರು ಬೆಳೆಯುವ ಪ್ರದೇಶ**

## 2.1 ಭಾರತದಲ್ಲಿ ಗೇರು ಬೆಳೆಯುವ ಪ್ರದೇಶಗಳು

ಪಶ್ಚಿಮ ಕರಾವಳಿಯಲ್ಲಿ ಗೇರು ಬೆಳೆಯುವ ಪ್ರಮುಖ ರಾಜ್ಯಗಳೆಂದರೆ ಮಹಾರಾಷ್ಟ್ರ, ಗೋವಾ, ಕರ್ನಾಟಕ ಮತ್ತು ಕೇರಳ. ಪೂರ್ವ ಕರಾವಳಿಯಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳದಲ್ಲಿ ಗೇರು ಬೆಳೆ ಬೆಳೆಯಲಾಗುತ್ತಿದೆ. ಗೇರು ಕೃಷಿಯು ಸಾಂಪ್ರದಾಯಿಕವಲ್ಲದ ಪ್ರದೇಶಗಳಾದ ಬಸ್ತರ್ ಪ್ರದೇಶ (ಚತ್ತೀಸ್‌ಗಡ) ಮತ್ತು ಕೋಲಾರ (ಕರ್ನಾಟಕ), ಗುಜರಾತ್, ಜಾರ್ಖಂಡ್‌ನ ಪ್ರದೇಶಗಳಲ್ಲಿ ಮತ್ತು ಈಶಾನ್ಯ ರಾಜ್ಯಗಳಲ್ಲಿಯೂ ಸಹ ಬೆಳೆಯಲಾಗುತ್ತಿದೆ. ಗೇರು ಬೆಳೆಯುವ ಭಾರತದ ವಿವಿಧ ರಾಜ್ಯಗಳ ಪ್ರಮುಖ ಜಿಲ್ಲೆಗಳನ್ನು ಕೋಷ್ಟಕ 1 ರಲ್ಲಿ ನೀಡಲಾಗಿದೆ.

**ಕೋಷ್ಟಕ 1. ಭಾರತದ ವಿವಿಧ ರಾಜ್ಯಗಳಲ್ಲಿ ಗೇರು ಬೆಳೆಯುವ ಪ್ರಮುಖ ಜಿಲ್ಲೆಗಳು**

| ರಾಜ್ಯ | ಗೇರು ಬೆಳೆಯುತ್ತಿರುವ ಜಿಲ್ಲೆಗಳು |
|---|---|
| ಕೇರಳ | ಪಾಲಕ್ಕಾಡ್, ಮಲಪ್ಪುರಂ, ಕೋಜಿಕೋಡ್, ಕಣ್ಣೂರು, ಕಾಸರಗೋಡು |
| ಕರ್ನಾಟಕ | ಕೋಲಾರ, ಶಿವಮೊಗ್ಗ, ಬೆಳಗಾವಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಗದಗ, ಬೀದರ್, ಚಿಕ್ಕಮಗಳೂರು, ತುಮಕೂರು, ಹಾಸನ |

| | |
|---|---|
| ಗೋವಾ | ರಾಜ್ಯದ ಎಲ್ಲಾ ಜಿಲ್ಲೆಗಳು |
| ತಮಿಳುನಾಡು | ಅರಿಯಲೂರು, ಕಡ್ಡಲೂರು, ಪುದುಕ್ಕೊಟ್ಟೈ, ವಿಲ್ಲುಪುರಂ, ಥೇನಿ, ತಿರುನೆಲ್ವೇಲಿ, ಶಿವಗಂಗ |
| ಆಂಧ್ರಪ್ರದೇಶ | ಶ್ರೀಕಾಕುಲಂ, ವಿಜಯನಗರ, ವಿಶಾಖಪಟ್ಟಣಂ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಗುಂಟೂರು, ಪ್ರಕಾಸಂ |
| ಒಡಿಶಾ | ಬಾಲೇಶ್ವರ, ಕಟಕ್, ಧಂಕನಲ್, ಗಂಜಾಂ, ಕಂಧಮಾಲ್, ಕೆಂದುಜಾರ್, ಕೊರಪುಟ್, ಮಯೂರ್ಭಂಜ್, ಪುರಿ, ಸಂಬಲ್ಪುರ್, ಸುಂದರ್‌ಗರ್, ಅಂಗುಲ್, ಖೋರ್ಧಾ, ನಾಯಘರ್, ಮಲ್ಕಂಗಿರಿ, ನವರಂಗ್‌ಪುರ |
| ಮಹಾರಾಷ್ಟ್ರ | ಥಾಣೆ, ರಾಯಗಡ್, ರತ್ನಗಿರಿ, ಸಿಂಧುದುರ್ಗ, ಕೊಲ್ಹಾಪುರ, ನಾಸಿಕ್ |
| ಛತ್ತೀಸ್‌ಗಡ | ಬಸ್ತರ್, ದಂತೇವಾಡ, ರಾಯಘರ್, ನಾರಾಯಣಪುರ |
| ಪಶ್ಚಿಮ ಬಂಗಾಳ | ಬುರ್ದ್ವಾನ್, ಬಿರ್ಭಮ್, ಬಂಕುರಾ, ಪುರ್‌ಲಿಯಾ, ಮಿಡ್ನಾಪುರ್ (ಪಶ್ಚಿಮ), ಮಿಡ್ನಾಪುರ್ (ಪೂರ್ವ) |
| ಜಾರ್ಖಂಡ್ | ಪೂರ್ವ ಸಿಂಗ್ಭೂಮ್, ಪಶ್ಚಿಮ ಸಿಂಗ್ಭೂಮ್, ಸಾರೈಕೆಲಾ |
| ಮೇಘಾಲಯ | ಪೂರ್ವ ಗಾರೋ ಬೆಟ್ಟಗಳು, ಪಶ್ಚಿಮ ಗಾರೋ ಬೆಟ್ಟಗಳು, ದಕ್ಷಿಣ ಗಾರೋ ಬೆಟ್ಟಗಳು |
| ತ್ರಿಪುರ | ದಕ್ಷಿಣ ತ್ರಿಪುರ |
| ಅಸ್ಸಾಂ | ಧುಬ್ರಿ, ಗೋಲ್ಪಾರ |
| ಗುಜರಾತ್ | ನವಸಾರಿ, ವಲ್ಸಾದ್, ಡಾಂಗ್ |

ಇತ್ತೀಚಿನ ಅಂಕಿಅಂಶಗಳ ಪ್ರಕಾರ (2017-18) ಒಡಿಶಾ ರಾಜ್ಯವು ಗೇರು (1.94 ಲಕ್ಷ ಹೆಕ್ಟೇರ್) ಬೆಳೆಯಲ್ಲಿರುವ ಅತಿ ಹೆಚ್ಚು ಪ್ರದೇಶವನ್ನು ಆಕ್ರಮಿಸಿಕೊಂಡಿದೆ. ನಂತರ ಮಹಾರಾಷ್ಟ್ರ (1.91 ಲಕ್ಷ ಹೆಕ್ಟೇರ್), ಆಂಧ್ರಪ್ರದೇಶ (1.87 ಲಕ್ಷ ಹೆಕ್ಟೇರ್), ತಮಿಳುನಾಡು (1.42 ಲಕ್ಷ ಹೆಕ್ಟೇರ್), ಕರ್ನಾಟಕ (1.29 ಲಕ್ಷ ಹೆಕ್ಟೇರ್), ಮತ್ತು ಕೇರಳ (0.92 ಲಕ್ಷ ಹೆಕ್ಟೇರ್) ಆಕ್ರಮಿಸಿಕೊಂಡಿವೆ. ಗೇರು ಉತ್ಪಾದನೆಯಲ್ಲಿ ಮಹಾರಾಷ್ಟ್ರವು ಪ್ರಥಮ (2.69 ಲಕ್ಷ ಟನ್) > ಸ್ಥಾನದಲ್ಲಿದ್ದು ಉಳಿದ ಸ್ಥಾನಗಳನ್ನು ಆಂಧ್ರಪ್ರದೇಶ (1.16 ಲಕ್ಷ ಟನ್)> ಒಡಿಶಾ (0.99 ಲಕ್ಷ ಟನ್)> ಕರ್ನಾಟಕ (0.89 ಲಕ್ಷ ಟನ್)> ಕೇರಳ (0.88 ಲಕ್ಷ ಟನ್) ಕ್ರಮವಾಗಿ ಅನುಸರಿಸುತ್ತವೆ. ಇದರ ಸಂಪೂರ್ಣ ಮಾಹಿತಿಯನ್ನು ಕೋಷ್ಟಕ-2ರಲ್ಲಿ ನೀಡಲಾಗಿದೆ.

**ಕೋಷ್ಟಕ 2. ಭಾರತದ ವಿವಿಧ ರಾಜ್ಯಗಳಲ್ಲಿನ ಗೇರು ಬೆಳೆಯ ವಿಸ್ತೀರ್ಣ, ಉತ್ಪಾದನೆ ಮತ್ತು ಉತ್ಪಾದಕತೆ (ಡಿಸಿಸಿಡಿ, 2018)**

| ರಾಜ್ಯ | ವಿಸ್ತೀರ್ಣ (000 ಹೆಕ್ಟೇರ್) | ಉತ್ಪಾದನೆ (000 ಮೆಟ್ರಿಕ್ ಟನ್) | ಉತ್ಪಾದಕತೆ (ಕೆಜಿ / ಹೆಕ್ಟೇರ್) |
|---|---|---|---|
| ಕೇರಳ | 92.81 | 88.18 | 962 |
| ಕರ್ನಾಟಕ | 129.07 | 89.45 | 672 |
| ಗೋವಾ | 58.25 | 34.26 | 561 |

| | | | |
|---|---|---|---|
| ಮಹಾರಾಷ್ಟ್ರ | 191.45 | 269.44 | 1378 |
| ತಮಿಳುನಾಡು | 142.28 | 71.03 | 478 |
| ಆಂಧ್ರಪ್ರದೇಶ | 186.78 | 116.92 | 600 |
| ಒಡಿಶಾ | 193.99 | 98.59 | 513 |
| ಪಶ್ಚಿಮ ಬಂಗಾಳ | 11.36 | 12.96 | 1140 |
| ಛತ್ತೀಸ್‌ಗಡ | 13.70 | 9.83 | 681 |
| ಜಾರ್ಖಂಡ್ | 14.83 | 6.13 | 393 |
| ತ್ರಿಪುರ | 4.25 | 3.45 | 812 |
| ಮೇಘಾಲಯ | 8.58 | 6.12 | 686 |
| ಅಸ್ಸಾಂ | 1.05 | 1.13 | 1028 |
| ಗುಜರಾತ್ | 7.25 | 6.50 | 900 |
| ಪಾಂಡಿಚೇರಿ | 5.00 | 2.16 | 432 |
| ಮಣಿಪುರಂ | 0.90 | 0.32 | 360 |
| ನಾಗಾಲ್ಯಾಂಡ್ | 0.50 | 0.54 | 1080 |

## 2.2. ಭಾರತದಲ್ಲಿ ಗೇರು ಬೆಳೆಯುವ ಪ್ರದೇಶಗಳ ಹವಾಮಾನ ಲಕ್ಷಣಗಳು

ಗೇರು ಬೆಳೆಯನ್ನು ಒಣ ಪ್ರದೇಶ (ಬಯಲು) ಮತ್ತು ಮಳೆಯಾಗುವ (ಮಲೆನಾಡು) ಎರಡು ಪ್ರದೇಶಗಳಲ್ಲಿಯೂ ಸಹಾ ಬೆಳೆಯಬಹುದು. 300 ಮಿ.ಮೀ (ಗುಜರಾತ್) ನಿಂದ >3500 ಮಿ.ಮೀ. (ಮಹಾರಾಷ್ಟ್ರ ಮತ್ತು ಕೇರಳ) ವರೆಗಿನ ಮಳೆಯಾಗುವ ಪ್ರದೇಶಗಳಲ್ಲಿ ಇದನ್ನು ಬೆಳೆಯಲಾಗುತ್ತದೆ. ಆದರೆ, 600 ರಿಂದ 1500 ಮಿ.ಮೀ. ಮಳೆಯಾಗುವ ಪ್ರದೇಶಗಳಲ್ಲಿ ಇಳುವರಿ ಉತ್ತಮವಾಗಿರುತ್ತದೆ. ಜನವರಿಯಿಂದ ಮಾರ್ಚ್ ವರೆಗೆ ಲಘು ಮಳೆಯು ಹೆಚ್ಚಿನ ಇಳುವರಿಯನ್ನು ನೀಡುವಲ್ಲಿ ಮತ್ತಷ್ಟು ಪೂರಕವಾಗಿರುತ್ತದೆ. ಸರಾಸರಿ ಕನಿಷ್ಠ ತಾಪಮಾನ 10 ರಿಂದ 22°C ಮತ್ತು ಸರಾಸರಿ ಗರಿಷ್ಠ ತಾಪಮಾನ 32 ರಿಂದ 40.1°C ವರೆಗೆ ಇರುವ ಪ್ರದೇಶಗಳಲ್ಲಿ ಗೇರನ್ನು ಬೆಳೆಯಬಹುದಾಗಿದೆ.

## 2.3. ಕರ್ನಾಟಕದಲ್ಲಿ ಗೇರು ಕೃಷಿ

ಭಾರತದಲ್ಲಿನ 12.28% ಗೇರು ಪ್ರದೇಶ ಮತ್ತು 10.92% ರಷ್ಟು ಉತ್ಪಾದನೆ ಕರ್ನಾಟಕದ ಕೊಡುಗೆಯಾಗಿದೆ. 2017-18ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಉತ್ಪಾದಕತೆಯು ಹೆಕ್ಟೇರಿಗೆ 672 ಕೆ.ಜಿ. ಆಗಿದ್ದು, ಇದು ಭಾರತದ ಸರಾಸರಿ ಹೆಕ್ಟೇರ್‌ಗೆ 753 ಕೆ.ಜಿ. ಗಿಂತ ಕಡಿಮೆಯಾಗಿರುತ್ತದೆ ಮತ್ತು ಇದು ಮಹಾರಾಷ್ಟ್ರದ (ಹೆಕ್ಟೇರಿಗೆ 1378 ಕೆಜಿ), ಪಶ್ಚಿಮ ಬಂಗಾಳದ (ಹೆಕ್ಟೇರಿಗೆ 1140 ಕೆಜಿ), ನಾಗಾಲ್ಯಾಂಡ್ (ಹೆಕ್ಟೇರಿಗೆ 1080 ಕೆಜಿ), ಅಸ್ಸಾಂ (ಹೆಕ್ಟೇರಿಗೆ 1028 ಕೆಜಿ) ಮತ್ತು ಕೇರಳ (ಹೆಕ್ಟೇರಿಗೆ 962 ಕೆಜಿ) ರಾಜ್ಯಗಳ ಸರಾಸರಿ ಉತ್ಪಾದಕತೆಗಿಂತ ಕಡಿಮೆ ಇರುತ್ತದೆ. ಗೇರು ಪ್ರದೇಶವು ಕರ್ನಾಟಕದಲ್ಲಿ ಕ್ರಮೇಣವಾಗಿ ಹೆಚ್ಚುತ್ತಿದೆ, ಬೇರೆ ತೋಟದ ಬೆಳೆಗಳಿಗಿಂತ ಗೇರು ಬೆಳೆಯು ಬರಪರಿಸ್ಥಿತಯನ್ನು ಹೊಂದಿಕೊಳ್ಳುವ ಕಾರಣದಿಂದ ಹಾಗೂ ಕಡಿಮೆ ನಿರ್ವಹಣೆ ವೆಚ್ಚ ಮತ್ತು ಹೆಚ್ಚುತ್ತಿರುವ ವಾಣಿಜ್ಯ ಮೌಲ್ಯದಿಂದಾಗಿ ಇತರ ತೋಟದ ಬೆಳೆಗಳಾದ ರಬ್ಬರ್, ಮಾವು ಇತ್ಯಾದಿಗಳ ಬದಲಾಗಿ ಜನರು ಗೇರು ಬೇಸಾಯದ ಕಡೆಗೆ ಹೆಚ್ಚಿನ ಗಮನ ಹರಿಸುತ್ತಿದ್ದಾರೆಯಾದರೂ ಈ ಹೆಚ್ಚಳವು ಇನ್ನೂ ಗಣನೀಯವಾಗಿ ಕಂಡುಬಂದಿಲ್ಲ.

## 3. ಭಾರತದಲ್ಲಿ ಗೇರು ಬೆಳೆಯುವ ಪ್ರದೇಶಗಳ ಮಣ್ಣಿನ ಗುಣಲಕ್ಷಣಗಳು

ಪ್ರಧಾನವಾಗಿ ಗೇರು ಬೆಳೆಯುವ ಪ್ರದೇಶಗಳಲ್ಲಿ ನಡೆಸಿದ ಮಣ್ಣಿನ ಸಮೀಕ್ಷೆಯ ಅಧ್ಯಯನಗಳ ಆಧಾರದ ಪ್ರಕಾರ ಮರಗಳು ಬಳಸಿಕೊಳ್ಳುವಂತಹ ಪೋಷಕಾಂಶಗಳನ್ನು ಮರುಪೂರ್ಣಗೊಳಿಸದ ಕಾರಣ ಮಣ್ಣಿನ ಪೋಷಕಾಂಶಗಳ ಕೊರತೆ ಕಂಡು ಬಂದಿದೆ. ಸಾವಯವ ಇಂಗಾಲವು ಪುತ್ತೂರಿನ 2.7% ಮಣ್ಣಿನ ಮಾದರಿಗಳಲ್ಲಿಯೂ (ವೆಂಗುರ್ಲಾದ) 20.0% ಮಾದರಿಗಳಲ್ಲಿ, ಭುವನೇಶ್ವರದ 81.4% ಮತ್ತು ಬಾಪಟ್ಲಾದ 92.9% ಮಾದರಿಗಳಲ್ಲಿ ನಿಗದಿತ ಪ್ರಮಾಣಕ್ಕಿಂತಲೂ ಕಡಿಮೆಯಿರುವುದು ವರದಿಯಾಗಿದೆ. ಲಭ್ಯವಿರುವ ಸಾರಜನಕವು ಪುತ್ತೂರಿನಲ್ಲಿ 94.3%, ವೆಂಗುರ್ಲಾದಲ್ಲಿ 37.1%, ಭುವನೇಶ್ವರದಲ್ಲಿ 94.3% ಮತ್ತು ಬಾಪಟ್ಲಾದಲ್ಲಿ 75.7% ಮಾದರಿಗಳಲ್ಲಿ ಕಡಿಮೆ ಎಂದು ದಾಖಲಾಗಿದೆ. ಕೇರಳದ ಪಿಲಿಕೋಡ್‌ನಲ್ಲಿರುವ ಗೇರು ತೋಟಗಳಲ್ಲಿ ಸಾವಯವ ಇಂಗಾಲ ಮತ್ತು ಲಭ್ಯವಿರುವ ಸಾರಜನಕ ಹೆಚ್ಚಾಗಿದೆ ಎಂದು ದಾಖಲಾಗಿದೆ ಮತ್ತು ಲಭ್ಯವಿರುವ ಪೊಟ್ಯಾಷಿಯಮ್ ಕಡಿಮೆ ಎಂದು ದಾಖಲಾಗಿದೆ. ಪುತ್ತೂರಿನಲ್ಲಿ 65.7%, ವೆಂಗುರ್ಲಾದಲ್ಲಿ 41.4%, ಭುವನೇಶ್ವರದಲ್ಲಿ 58.6%, ಬಾಪಟ್ಲಾದಲ್ಲಿ 22.9% ಮತ್ತು ಪಿಲಿಕೋಡ್‌ನಲ್ಲಿ 17.1% ಮಾದರಿಗಳಲ್ಲಿ ಗಿಡಗಳಿಗೆ ಬೇಕಾಗುವ ರಂಜಕ, ಮೆಗ್ನೀಷಿಯಮ್, ಕ್ಯಾಲ್ಸಿಯಂ ಕೊರತೆಯಿದೆ. ಲಘು ಪೋಷಕಾಂಶಗಳಾದ ಕಬ್ಬಿಣ ಮತ್ತು ಮ್ಯಾಂಗನೀಸ್ ಸಾಕಷ್ಟಿದ್ದು, ಆದಾಗ್ಯೂ ಮಣ್ಣಿನಲ್ಲಿ ಸಾಮಾನ್ಯವಾಗಿ ಸತು (ವಿವಿಧ ಪ್ರದೇಶಗಳಲ್ಲಿ 22.9 ಮತ್ತು 57.14% ಮಾದರಿಗಳು) ಮತ್ತು ತಾಮ್ರ (ವಿವಿಧ ಪ್ರದೇಶಗಳಲ್ಲಿ 8.57 ರಿಂದ 32.9% ಮಾದರಿಗಳಲ್ಲಿ) ಕೊರತೆ ಕಂಡು ಬಂದಿದೆ. ಈ ಫಲಿತಾಂಶಗಳು ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಯಲ್ಲಿ ಗೇರು ಬೆಳೆಯುತ್ತಿರುವ ಮಣ್ಣಿನ ಪೋಷಕಾಂಶಗಳ ಕೊರತೆಯನ್ನು ಸೂಚಿಸುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಮಣ್ಣಿನ ಪರೀಕ್ಷೆ ಆಧಾರಿತ ಪೋಷಕಾಂಶಗಳ ನಿರ್ವಹಣೆಯು ಗೇರಿನ ಬೆಳವಣಿಗೆ ಮತ್ತು ಉತ್ಪಾದಕತೆಯನ್ನು ಸುಧಾರಿಸುವುದಲ್ಲದೆ, ಮಣ್ಣಿನ ಅವನತಿಯನ್ನು ಸಹ ತಡೆಯುತ್ತದೆ.

## 4. ಗೇರಿನಲ್ಲಿ ಪೋಷಕಾಂಶಗಳ ಅವಶ್ಯಕತೆ

ಗೇರು ಮರವು ಮಣ್ಣಿನಿಂದ ವಾರ್ಷಿಕವಾಗಿ ಗಣನೀಯ ಪ್ರಮಾಣದ ಪೋಷಕಾಂಶಗಳನ್ನು ತೆಗೆದುಹಾಕುತ್ತದೆ. ಮೂವತ್ತು ವರ್ಷದ ಹಳೆಯ ಗೇರು ಮರವು 2.847 ಕೆಜಿ ಸಾರಜನಕ (N), 0.75 ಕೆಜಿ ರಂಜಕ ($P_2O_5$) ಮತ್ತು 1.265 ಕೆಜಿ ಪೊಟ್ಯಾಷ್ ($K_2O$) ಮಣ್ಣಿನಿಂದ ಪಡೆದುಕೊಂಡಿರುವ ವರದಿ ಇದೆ. ಪೋಷಕಾಂಶಗಳನ್ನು ನೀಡದ 6 ವರ್ಷದ ಗೇರು ತೋಟಗಳಲ್ಲಿ ನಿವ್ವಳ ಋಣಾತ್ಮಕ ಎನ್, ಪಿ ಮತ್ತು ಕೆ ಸಮತೋಲನವು 113, 38 ಮತ್ತು 92 ಕೆಜಿ ಹೆಕ್ಟೇರ್‌ಗೆ ಎಂದು ಅಧ್ಯಯನಗಳು ತಿಳಿಸಿವೆ. ಮಣ್ಣಿನ ಫಲವತ್ತತೆ ಮತ್ತು ಪೋಷಕಾಂಶಗಳ ಪೂರೈಕೆಯು ಇಳುವರಿ ಮತ್ತು ಉತ್ಪನ್ನದ ಗುಣಮಟ್ಟವನ್ನು ನಿರ್ಧರಿಸುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಕ್ಷೇತ್ರ ಮತ್ತು ಪೋಷಕಾಂಶಗಳ ನಿರ್ವಹಣೆಯನ್ನು ಸರಿಯಾಗಿ ನಿಭಾಯಿಸದಿದ್ದಲ್ಲಿ ಇಳುವರಿ ಕುಸಿತದ ಜೊತೆಗೆ ನಿರಂತರ ಪೋಷಕಾಂಶಗಳ ಗಣಿಗಾರಿಕೆ ಮತ್ತು ಮಣ್ಣಿನ ಆರೋಗ್ಯದ ಕ್ಷೀಣತೆಗೆ ಕಾರಣವಾಗುತ್ತದೆ.

## 5. ಗೇರಿನಲ್ಲಿ ಪೋಷಕಾಂಶಗಳ ಕೊರತೆಯನ್ನು ನಿರ್ಣಯಿಸುವುದು

ಗೇರು ಗಿಡಗಳು ಮಣ್ಣಿನಿಂದ ಪೋಷಕಾಂಶಗಳನ್ನು ನಿರಂತರವಾಗಿ ತೆಗೆದುಕೊಳ್ಳುವುದರಿಂದ ಮಣ್ಣಿನಲ್ಲಿನ ಪೋಷಕಾಂಶಗಳ ಸವಕಳಿಗೆ ಕಾರಣವಾಗುತ್ತದೆ. ಇತರೆ ಜೀವಿಗಳಲ್ಲಿ ಪೋಷಕಾಂಶಗಳ ಕೊರತೆ ಕಾಣುವಂತೆ ಮಣ್ಣಿನ ಪೋಷಕಾಂಶಗಳ ಸವಕಳಿಯನ್ನು ಕಣ್ಣಳತೆಯಲ್ಲಿ ನಿರ್ಣಯಿಸಲು ಸಾಧ್ಯವಿಲ್ಲ. ಮಣ್ಣಿನ ಪೋಷಕಾಂಶಗಳ ಸ್ಥಿತಿಯನ್ನು / ಪ್ರಮಾಣವನ್ನು ಪರೀಕ್ಷಿಸಲು ಮಣ್ಣಿನ ಮಾದರಿಯನ್ನು ಪಡೆದು ಪ್ರಯೋಗಾಲಯದಲ್ಲಿ ಪರೀಕ್ಷಿಸ ಬೇಕಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಹೊಸ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಮಣ್ಣಿನ ಪರೀಕ್ಷಾ ಕಿಟ್‌ಗಳ ಸಹಾಯದಿಂದ ಬೆಳೆ ಇರುವ ತಾಕುಗಳಲ್ಲಿಯೇ ಮಣ್ಣನ್ನು ಪರೀಕ್ಷಿಸಲು ಸಾಧ್ಯವಾಗುತ್ತದೆ. ಆದರೆ, ಕ್ಷೇತ್ರ ಪರೀಕ್ಷಾ ಕಿಟ್‌ಗಳ ಫಲಿತಾಂಶಗಳು ಪ್ರಯೋಗಾಲಯ ಪರೀಕ್ಷೆಗಳಿಗಿಂತ ಕಡಿಮೆ ನಿಖರವಾಗಿರುತ್ತವೆ, ಏಕೆಂದರೆ ಅವು ದೃಶ್ಯ ಬಣ್ಣ ಅವಲೋಕನಗಳನ್ನು ಆಧರಿಸಿರುತ್ತವೆ. ಇದನ್ನು ಹೊರತುಪಡಿಸಿ ಎಲೆಗಳಲ್ಲಿ ಪೋಷಕಾಂಶಗಳ ಸ್ಥಿತಿಯನ್ನು

ಪರೀಕ್ಷಿಸುವ ಮೂಲಕ ಹಾಗೂ ಗೇರು ಮರದ ಎಲೆಗಳ ಕೊರತೆಯ ಲಕ್ಷಣಗಳನ್ನು ಹುಡುಕುವುದರ ಮೂಲಕ ಮಣ್ಣಿನ ಫಲವತ್ತತೆಯನ್ನು ನಿರ್ಣಯಿಸಬಹುದು.

### 5.1. ಮಣ್ಣಿನ ಪರೀಕ್ಷೆ ಮತ್ತು ವ್ಯಾಖ್ಯಾನ

ಮಣ್ಣಿನ ಫಲವತ್ತತೆ ಮಟ್ಟವನ್ನು ನಿರ್ಣಯಿಸಲು ಮಣ್ಣಿನ ಪರೀಕ್ಷೆ ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಗೇರು ಬೆಳೆಗೆ ರಸಗೊಬ್ಬರಗಳ ಶಿಫಾರಸನ್ನು ಸೂಚಿಸಲು, ನೀಡಿದ ಪೋಷಕಾಂಶಗಳಿಗೆ ಗೇರು ಗಿಡಗಳು ಸ್ಪಂದಿಸುವ ಪ್ರತಿಕ್ರಿಯೆಯನ್ನು ಗ್ರಹಿಸಲು ಮತ್ತು ಮಣ್ಣಿನ ಸಮಸ್ಯೆಗಳಾದ ಆಮ್ಲೀಯತೆ, ಲವಣಾಂಶ ಮತ್ತು ಸೋಡಿಟಿಯನ್ನು ನಿರ್ಣಯಿಸಲು ಇದನ್ನು ಬಳಸಲಾಗುತ್ತದೆ.

### 5.1.1. ಮಣ್ಣಿನ ಮಾದರಿ

ಸರಿಯಾದ ಯೋಜನೆಯೊಂದಿಗೆ ಮಣ್ಣಿನ ಮಾದರಿಯನ್ನು ಕೈಗೊಳ್ಳಬೇಕು. ಮಣ್ಣಿನ ಒಂದು ಸಣ್ಣ ಭಾಗದ ಮೇಲೆ ಮಣ್ಣಿನ ಪರೀಕ್ಷೆಯನ್ನು ನಡೆಸಲಾಗುವುದರಿಂದ, ಸಂಗ್ರಹಿಸಿದ ಮಣ್ಣು ಮಾದರಿ ಪ್ರದೇಶಕ್ಕೆ ಮಾದರಿ ಪ್ರತಿನಿಧಿಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ. ತೋಟವನ್ನು ಸ್ಥಾಪಿಸುವ ಮೊದಲು ಗೇರು ಬೆಳೆಗೆ ಭೂಮಿಯ ಸೂಕ್ಷ್ಮತೆಯನ್ನು ನಿರ್ಣಯಿಸಲು ಮಣ್ಣಿನ ಪರೀಕ್ಷೆಗೆ ಮಾದರಿಗಳನ್ನು ಕೈಗೊಳ್ಳಬೇಕು. ಹಳೆಯ ತೋಟಗಳಲ್ಲಿ ಕಾಲಕಾಲಕ್ಕೆ ಮಣ್ಣಿನ ಪರೀಕ್ಷೆ ಮಾಡಿಸುವುದರ ಮೂಲಕ ಮಣ್ಣಿನ ಫಲವತ್ತತೆಯನ್ನು ತಿಳಿದುಕೊಂಡು ಅವಶ್ಯವಿರುವ ಗೊಬ್ಬರಗಳನ್ನು ಕಾಲಕಾಲಕ್ಕೆ ನೀಡುವುದರಿಂದ ಮಣ್ಣಿನ ಫಲವತ್ತತೆ ಹಾಗೂ ಆರೋಗ್ಯವನ್ನು ಕಾಪಾಡಬಹುದು.

#### 5.1.1.1. ಮಾದರಿ ಘಟಕದ ಆಯ್ಕೆ

ಮೊದಲು ತೋಟದ ಸುತ್ತಲು ಓಡಾಡುವ ಮೂಲಕ ಬೆಳೆಯಿರುವ ಜಾಗದ ಮಣ್ಣಿನ ಹಾಗೂ ಬೆಳೆಯ ಗುಣಲಕ್ಷಣಗಳಾದ ಇಳಿಜಾರು, ಬಣ್ಣ, ವಿನ್ಯಾಸ, ಬೆಳೆ ಮಾದರಿ ಮತ್ತು ನಿರ್ವಹಣಾ ಅಭ್ಯಾಸಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸವನ್ನು ಗಮನದಲ್ಲಿರಿಸಿಕೊಂಡು ಸಮೀಕ್ಷೆಯನ್ನು ನಡೆಸಬೇಕು. ಈ ಎಲ್ಲಾ ಅಂಶಗಳು ಒಂದು ಆಗಿದ್ದರೆ, ಒಂದು ಕ್ಷೇತ್ರವನ್ನು ಒಂದು ಮಾದರಿ ಘಟಕವೆಂದು ಪರಿಗಣಿಸಬಹುದು. ಈ ಪ್ರತಿಯೊಂದು ಗುಣಲಕ್ಷಣಗಳಲ್ಲಿ ಭಿನ್ನವಾಗಿರುವ ಪ್ರದೇಶಗಳಿಗೆ ಪ್ರತ್ಯೇಕ ಮಾದರಿಗಳ ಅಗತ್ಯವಿದೆ. ಆದರೆ, ಯಾವುದೇ ಸಂದರ್ಭದಲ್ಲಿ, ಪ್ರತಿ 1 ರಿಂದ 2 ಹೆಕ್ಟೇರ್‌ಗಳಿಗೆ ಒಂದು ಮಾದರಿ ಅಗತ್ಯವಿದೆ. ಇತ್ತೀಚೆಗೆ ಫಲವತ್ತಾದ ತಾಕುಗಳು, ಬದುಗಳು, ಕಾಲುವೆಗಳು, ಬಾವಿಗಳ ಹತ್ತಿರ ಮತ್ತು ಗೊಬ್ಬರದ ಹೊಂಡಗಳು ಮುಂತಾದ ಪ್ರದೇಶಗಳನ್ನು ಮಾದರಿ ಮಾಡುವಾಗ ಕೈಬಿಡಬೇಕು. ಸಂಪನ್ಮೂಲಗಳ ಲಭ್ಯತೆಯ ಮೇಲೆ ದೊಡ್ಡ ಪ್ರದೇಶಗಳನ್ನು ಹೆಚ್ಚಿನ ಸಂಖ್ಯೆಯ ಸಣ್ಣ ಘಟಕಗಳಾಗಿ ವಿಂಗಡಿಸುವ ಮೂಲಕ ನಿಖರತೆಯನ್ನು ಹೆಚ್ಚಿಸಬಹುದು.

#### 5.1.1.2. ಗೇರು ಬೆಳೆಯಲ್ಲಿ ಮಣ್ಣಿನ ಮಾದರಿ ಸಂಗ್ರಹಿಸುವ ವಿಧಾನ

ಗೇರು ಬೆಳೆಯಲ್ಲಿ ಮಣ್ಣಿನ ಮಾದರಿಗಳನ್ನು ವಿವಿಧ ಆಳಗಳಿಂದ ಸಂಗ್ರಹಿಸಲಾಗುತ್ತದೆ. ಗೇರು ಬೆಳೆಯ ಮಣ್ಣಿನ ಮಾದರಿಯ ಪ್ರಮಾಣಿತ ಆಳ 0-30, 30-60 ಮತ್ತು 60-90 ಸೆಂ.ಮೀ. ಗಿಡದ ಕಾಂಡ ಮತ್ತು ರಸಗೊಬ್ಬರಗಳನ್ನು ಹಾಕುವ ಜಾಗದ ನಡುವೆ ಮಾದರಿಯನ್ನು ತೆಗೆದುಕೊಳ್ಳಬೇಕು. ಗಿಡದ ಸುತ್ತಲಿನ ನಾಲ್ಕು ದಿಕ್ಕುಗಳಿಂದ ನಾಲ್ಕು ಮಾದರಿಗಳನ್ನು ತೆಗೆದುಕೊಂಡು ಸಂಯೋಜಿತ ಮಾದರಿಯನ್ನು ತಯಾರಿಸಬೇಕು. ಹೊಸ ತೋಟಗಳನ್ನು ಸ್ಥಾಪಿಸುವ ಮೊದಲು ಮಣ್ಣಿನ ಮಾದರಿಗಳನ್ನು ಮತ್ತು ಅಸ್ತಿತ್ವದಲ್ಲಿರುವ ತೋಟಗಳಲ್ಲಿ ಗೊಬ್ಬರ ಹಾಕುವ ಮೊದಲು ಮತ್ತು ಮಳೆಗಾಲ ಮುಗಿದ ನಂತರ ಮಣ್ಣಿನ ಮಾದರಿಗಳನ್ನು ತೆಗೆದುಕೊಳ್ಳಬೇಕು.

#### 5.1.1.3. ಮಣ್ಣಿನ ಮಾದರಿ ಸಂಗ್ರಹಿಸುವ ವಿಧಾನ

ಬೆಳೆ ವಿಸ್ತೀರ್ಣದ ಆಧಾರದ ಮೇಲೆ ಮಾದರಿ ಮಾಡಬೇಕಾದ ಘಟಕಗಳ ಸಂಖ್ಯೆಯನ್ನು ನಿರ್ಧರಿಸ ಬೇಕಾಗುತ್ತದೆ. ಪ್ರತಿ ಏಕರೂಪದ ಕ್ಷೇತ್ರವನ್ನು ಅಂಕುಡೊಂಕಾದ ರೀತಿಯಲ್ಲಿ ಹಾದುಹೋಗುವ ಮೂಲಕ 10-15 ಉಪ ಮಾದರಿಗಳನ್ನು ಸಂಗ್ರಹಿಸಬೇಕು. ಈ ಉಪ ಮಾದರಿಗಳನ್ನು ಬೆರೆಸಿ ಪ್ರತಿ ಯೂನಿಟ್‌ಗೆ ಒಂದು

ಸಂಯೋಜಿತ ಮಾದರಿಯನ್ನು ತಯಾರಿಸಬೇಕು. ಮಿಶ್ರಣ ಮಾಡುವಾಗ ಆಯಾ ಆಳದಿಂದ ಪಡೆದ ಮಾದರಿಗಳನ್ನು ಬೆರೆಸಲು ಕಾಳಜಿ ವಹಿಸಬೇಕು. ಮಾದರಿಗಳನ್ನು ತೆಗೆದುಕೊಳ್ಳುವ ಮೊದಲು, ಮಣ್ಣಿನ ಮೇಲ್ಮೈಯಲ್ಲಿರುವ ಕಸ-ಕಡ್ಡಿಗಳನ್ನು ತೆಗೆದುಹಾಕಿ, ಆಗರ್ ಬಳಸಿ ಮಾದರಿಯನ್ನು ಸಂಗ್ರಹಿಸಬಹುದು. ಇದು ಸಲಿಕೆ / ಗುದ್ದಲಿ ಬಳಕೆಗೆ ಹೋಲಿಸಿದರೆ ವಿವಿಧ ಆಳಗಳಿಂದ ಸುಲಭವಾಗಿ ಮಾದರಿಗಳನ್ನು ಪಡೆಯಲು ಸಹಾಯಕವಾಗುತ್ತದೆ. ಲಭ್ಯವಿಲ್ಲದಿದ್ದರೆ ಮಾದರಿಯನ್ನು ಸಂಗ್ರಹಿಸಲು ಜಿಐ ಪೈಪುಗಳನ್ನೂ ಸಹ ಬಳಸಬಹುದು.



**ಚಿತ್ರ 2. ಕ್ರಿಸ್‌ಕ್ರಾಸ್ ಮಾದರಿಯಲ್ಲಿ ಮಣ್ಣಿನ ಮಾದರಿ ಸಂಗ್ರಹಿಸುವ ವಿಧಾನ**

ಭೂಮಾಲೀಕರು ಕೇವಲ ಮೇಲ್ಮಣ್ಣಿನ ಮಾದರಿ ವಿಶ್ಲೇಷಣೆಯಲ್ಲಿ ಆಸಕ್ತಿ ಹೊಂದಿದ್ದರೆ, V(ವಿ)-ಆಕಾರದಲ್ಲಿ 15 ರಿಂದ 30 ಸೆಂ.ಮೀ. ಆಳದವರೆಗೆ ಗುದ್ದಲಿಯ ಮೂಲಕ ತೆಳುವಾದ ಸ್ಲೈಸ್‌ನಲ್ಲಿ (1.5-2.5 ಸೆಂ.ಮೀ.) ಮೇಲಿನಿಂದ ಕೆಳಕ್ಕೆ ಎಳೆಯುವ ಮೂಲಕ ಮಣ್ಣಿನ ಮಾದರಿ ಪಡೆಯಬಹುದು. ಗುರುತಿಸಲಾದ ಎಲ್ಲಾ ತಾಕುಗಳಿಂದ ಉಪ ಮಾದರಿಗಳನ್ನು ತೆಗೆದುಕೊಳ್ಳುವ ಮೂಲಕ ಸಂಯೋಜಿತ ಮಾದರಿಯನ್ನು ತಯಾರಿಸಬೇಕು.




**ಚಿತ್ರ 3. ಮೇಲಿನ ಮಣ್ಣಿನ ಮಾದರಿಯನ್ನು ಸಂಗ್ರಹಿಸುವ ವಿಧಾನ**

### 5.1.1.4. ಮಿಶ್ರಣ, ಕ್ವಾಟರಿಂಗ್ ಮತ್ತು ಸಂಗ್ರಹಣೆ

ಉಪ ಮಾದರಿಗಳನ್ನು ಕೂಡಿಸಿ 500 ಗ್ರಾಂ. ಗಾತ್ರದ ಸಂಯೋಜಿತ ಮಾದರಿಗಳನ್ನು ಕ್ವಾಟರಿಂಗ್ ವಿಧಾನದ ಮೂಲಕ ತಯಾರಿಸಬಹುದು. ಇದಕ್ಕಾಗಿ ಎಲ್ಲಾ ಉಪ ಮಾದರಿಗಳನ್ನು ಸಂಪೂರ್ಣವಾಗಿ ಮಿಶ್ರಣ ಮಾಡಿ, ಕಾಗದ ಅಥವಾ ಬಟ್ಟೆಯ ಮೇಲೆ ಹರಡಿ, ದೊಡ್ಡ ಕಲ್ಲುಗಳು ಮತ್ತು ಬೇರುಗಳ ತುಂಡುಗಳನ್ನು ತೆಗೆದುಹಾಕಿ, ನಾಲ್ಕು ಭಾಗಗಳನ್ನು ಮಾಡಿ ಎರಡು ವಿರುದ್ಧ ಭಾಗಗಳನ್ನು ತೆಗೆದುಹಾಕಿ ಇನ್ನು ಉಳಿದ ಎರಡು ಭಾಗಗಳನ್ನು ಉಳಿಸಿಕೊಳ್ಳಬೇಕು. ಸೂಕ್ತವಾದ ಪ್ರಮಾಣವನ್ನು ಪಡೆಯುವವರೆಗೆ ಈ ಪ್ರಕ್ರಿಯೆಯನ್ನು ಮುಂದುವರಿಸಬಹುದು.



**ಚಿತ್ರ 4. ಕ್ವಾರ್ಟರಿಂಗ್ ಪದ್ಧತಿ ಮೂಲಕ ಸಂಯೋಜಿತ ಮಾದರಿಗಳ ಪ್ರಮಾಣವನ್ನು ಕಡಿಮೆ ಮಾಡುವ ವಿಧಾನ**

ಸ್ವಚ್ಛಗೊಳಿಸಿದ ಪಾಲಿಥೀನ್ ಅಥವಾ ಬಟ್ಟೆಯ ಚೀಲಕ್ಕೆ ಮಣ್ಣನ್ನು ವರ್ಗಾಯಿಸಿ ರೈತನ ಹೆಸರು ಮತ್ತು ವಿಳಾಸ ಸೂಚಿಸುವ ಲೇಬಲ್, ಮಾದರಿ ಪಡೆದ ಆಳ, ತಾಕನ್ನು ಗುರುತಿಸುವ ಗುರುತು, ಮಾದರಿ ಸಂಗ್ರಹಿಸಿದ ದಿನಾಂಕ

ಇತ್ಯಾದಿ ಮಾಹಿತಿಗಳನ್ನು ಸೂಚಿಸುವ ಚೀಟಿಯನ್ನು ಚೀಲದ ಒಳಗೆ ಮತ್ತು ಹೊರಗೆ ಇರಿಸಬೇಕು. ಈ ಮಾದರಿಗಳನ್ನು ತಕ್ಷಣ ಹತ್ತಿರದ ಮಣ್ಣಿನ ಪರೀಕ್ಷಾ ಪ್ರಯೋಗಾಲಯಕ್ಕೆ ಕಳುಹಿಸುವುದರ ಜೊತೆಗೆ, ಮಾದರಿಯ ಮಾಹಿತಿ, ಪರೀಕ್ಷಿಸಬೇಕಾದ ನಿಯತಾಂಕಗಳು ಮತ್ತು ವಿಶ್ಲೇಷಣೆ ಶುಲ್ಕವನ್ನು ನೀಡಬೇಕಾಗುತ್ತದೆ. ಮಾದರಿಗಳನ್ನು ತಡವಾಗಿ ವಿಶ್ಲೇಷಣೆಗೆ ಕಳುಹಿಸುವುದಾದರೆ 2-3 ದಿನಗಳ ಕಾಲ ನೆರಳಿನಲ್ಲಿ ಮಣ್ಣನ್ನು ಒಣಗಿಸಿ ನಂತರ ಪ್ರಯೋಗಾಲಯಕ್ಕೆ ಕಳುಹಿಸಬೇಕು.

### 5.1.2. ಮಣ್ಣಿನ ಪರೀಕ್ಷೆ ಮತ್ತು ಮಣ್ಣಿನ ಆರೋಗ್ಯ ಚೀಟಿ (ಕಾರ್ಡ್)

ಪ್ರಯೋಗಾಲಯದಲ್ಲಿ, ಮಣ್ಣಿನ ಮಾದರಿಗಳನ್ನು ವಿವಿಧ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಮಣ್ಣಿನ ರಸಸಾರ (ಮಣ್ಣಿನ ಆಮ್ಲೀಯತೆ / ಕ್ಷಾರೀಯತೆಯ ಆಳತೆಯಾಗಿ), ವಿದ್ಯುತ್ ವಾಹಕತೆ (ಮಣ್ಣಿನ ಲವಣಾಂಶದ ಸ್ಥಿತಿಯನ್ನು ತಿಳಿಯಲು), ಸಾವಯವ ಇಂಗಾಲ, ಲಭ್ಯವಿರುವ ಸಾರಜನಕ, ಲಭ್ಯವಿರುವ ರಂಜಕ ಮತ್ತು ಲಭ್ಯವಿರುವ ಪೊಟ್ಯಾಷಿಯಮ್, ಕ್ಯಾಲ್ಸಿಯಂನಂತಹ ದ್ವಿತೀಯ ಪೋಷಕಾಂಶಗಳು, ಮೆಗ್ನೀಷಿಯಮ್, ಸಲ್ಫರ್ ಮತ್ತು ಕಬ್ಬಿಣ, ಮ್ಯಾಂಗನೀಸ್, ಸತು, ತಾಮ್ರ, ಬೋರಾನ್ ಮತ್ತು ಮಾಲಿಬ್ಡಿನಂನಂತಹ ಲಘು ಪೋಷಕಾಂಶಗಳ ವಿಶ್ಲೇಷಣೆ ಮಾಡಲಾಗುತ್ತದೆ. ಮಣ್ಣಿನ ರಸಸಾರ 5.5 ಕ್ಕಿಂತ ಕಡಿಮೆಯಿದ್ದರೆ, ಸುಣ್ಣದ ಅಗತ್ಯವನ್ನು ಪರೀಕ್ಷಿಸುವುದು ಉತ್ತಮ. ಮಣ್ಣಿನ ಪರೀಕ್ಷಾ ಪ್ರಯೋಗಾಲಯಗಳು ಫಲಿತಾಂಶವನ್ನು ವರದಿ ಅಥವಾ ಮಣ್ಣಿನ ಆರೋಗ್ಯ ಚೀಟಿಗಳ ರೂಪದಲ್ಲಿ ನೀಡುತ್ತವೆ (ಚಿತ್ರ 4). ಮಣ್ಣಿನ ಆರೋಗ್ಯ ಕಾರ್ಡ್‌ಗಳಲ್ಲಿ ಮಣ್ಣಿನಲ್ಲಿರುವ ಪೋಷಕಾಂಶಗಳು ಮತ್ತು ಅದರ ಪ್ರಮಾಣದ ಮಾಹಿತಿಯನ್ನು ಹೊಂದಿರುತ್ತದೆ. ಹಾಗೆಯೇ ಮಣ್ಣಿನ ಮತ್ತು ಗಿಡದ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರಗಳ ಶಿಫಾರಸ್ಸು ಮತ್ತು ನೀಡುವ ವಿಧಾನಗಳು ಅಥವಾ ಮಾರ್ಗಸೂಚಿಗಳನ್ನು ಸಹ ಒಳಗೊಂಡಿರುತ್ತದೆ.

Department of Agriculture & Cooperation
Ministry of Agriculture & Farmers Welfare
Government of India

ICAR- Directorate of Cashew Research, Puttur, Karnataka

Soil Health Card No.: DCR/

Validity :

| | |
|---|---|
| Name | |
| Address | |
| Mobile Number | |
| Latitude | |
| Longitude | |
| Sample date | |

World Soil Day

Healthy Soils for a Healthy Life

For application guidelines please see overleaf

| Name of Laboratory | Soil Science Laboratory, ICAR-DCR, Puttur | | | |
|---|---|---|---|---|
| SOIL TEST RESULTS | | | | |
| Sl. No. | Parameter | Test value | Unit | Rating |
| 1 | pH | | | |
| 2 | EC | | dS/m | |
| 3 | Organic carbon (OC) | | % | |
| 4 | Available N | | kg/ha | |
| 5 | Available Phosphorus ($P_2O_5$) | | kg/ha | |
| 6 | Available Potassium ($K_2O$) | | kg/ha | |
| 7 | Iron (Fe) | | ppm | |
| 8 | Manganese (Mn) | | ppm | |
| 9 | Zinc (ppm) | | ppm | |
| 10 | Copper (Cu) | | ppm | |
| 11 | Boron (B) | | ppm | |
| 12 | Molybdenum (Mo) | | ppm | |

For exact quantity of fertilizer to use for cashew, please use Fertilizer calculator available at:
1. www.cashew.icar.gov.in
2. Download the App from Google play store

**ಚಿತ್ರ 5. ಮಣ್ಣಿನ ಆರೋಗ್ಯ ಚೀಟಿಯ ಮಾದರಿ**

### 5.1.3. ಮಣ್ಣಿನ ಪರೀಕ್ಷೆಯ ಫಲಿತಾಂಶದ ವ್ಯಾಖ್ಯಾನ

ಮಣ್ಣಿನ ಪರೀಕ್ಷೆಯ ಮತ್ತು ವಿಶ್ಲೇಷಣೆಯ ಫಲಿತಾಂಶಗಳ ಆಧಾರದ ಮೇಲೆ ಹಾಗೂ ಪ್ರಮುಖ ಪೋಷಕಾಂಶಗಳಿಗೆ ಸಂಬಂಧಿಸಿದಂತೆ ಮಣ್ಣನ್ನು ಕಡಿಮೆ, ಮಧ್ಯಮ ಮತ್ತು ಹೆಚ್ಚು ಪೋಷಕಾಂಶಗಳನ್ನು ಹೊಂದಿರುವ ಮಣ್ಣು ಎಂದು ವಿಭಜಿಸಲಾಗಿದೆ. ಲಘು ಪೋಷಕಾಂಶಗಳಿಗೆ ಸಂಬಂಧಿಸಿದಂತೆ ಮಣ್ಣನ್ನು ಸಾಕಷ್ಟು ಪೋಷಕಾಂಶಗಳು ಲಭ್ಯವಿರುವ ಮತ್ತು ಕೊರತೆ ಇರುವ ಮಣ್ಣು ಎಂದು ವರ್ಗೀಕರಿಸಲಾಗಿದೆ. ಶಿಫಾರಸ್ಸು ಮಾಡಿದ ರಸಗೊಬ್ಬರ ಪ್ರಮಾಣವನ್ನು ಮಣ್ಣಿನ ಫಲವತ್ತತೆ ಮಟ್ಟದ ಆಧಾರದ ಮೇಲೆ ಮತ್ತಷ್ಟು ಹೊಂದಾಣಿಕೆ ಮಾಡಲಾಗುತ್ತದೆ. ಮಣ್ಣಿನ ಪರೀಕ್ಷೆಯಲ್ಲಿ ಕಡಿಮೆ ರೇಟಿಂಗ್ ಬಂದ ಸಂದರ್ಭದಲ್ಲಿ, ಶಿಫಾರಸ್ಸು ಮಾಡಿದ ಪೋಷಕಾಂಶಗಳಿಂದ 30% ಹೆಚ್ಚಿನದನ್ನು ನೀಡಬೇಕಾಗುತ್ತದೆ. ಹಾಗೆಯೇ, ಹೆಚ್ಚಿನ ಮಣ್ಣಿನ ರೇಟಿಂಗ್ ಬಂದಲ್ಲಿ 30% ಕಡಿಮೆ ನೀಡಬೇಕು. ಮಧ್ಯಮ ಮಣ್ಣಿನ ಪರೀಕ್ಷಾ ರೇಟಿಂಗ್ ಕಂಡುಬಂದಲ್ಲಿ ಶಿಫಾರಸ್ಸು ಮಾಡಲಾದ ಪ್ರಮಾಣವನ್ನು ನೀಡಬೇಕು. ಸಾಮಾನ್ಯ ಮಣ್ಣಿನ ಪರೀಕ್ಷಾ ರೇಟಿಂಗ್ ಮಾನದಂಡವನ್ನು ಕೋಷಕ 3 ಮತ್ತು 4 ರಲ್ಲಿ ನೀಡಲಾಗಿದೆ.

**ಕೋಷ್ಟಕ 3. ಪ್ರಮುಖ ಪೋಷಕಾಂಶಗಳಿಗೆ ಮಣ್ಣಿನ ಪರೀಕ್ಷಾ ರೇಟಿಂಗ್ ಮಾನದಂಡ**

| ನಿಯತಾಂಕಗಳು | ಕಡಿಮೆ | ಮಧ್ಯಮ | ಹೆಚ್ಚು |
|---|---|---|---|
| ಸಾವಯವ ಇಂಗಾಲ (%) | 0.5 | 0.51-0.75 | >0.75 |
| ಲಭ್ಯವಿರುವ ಸಾರಜನಕ (ಕೆಜಿ/ಹೆಕ್ಟೇರ್) | 280 | 281-560 | >560 |
| ಲಭ್ಯವಿರುವ ರಂಜಕಾ (ಕೆಜಿ/ಹೆಕ್ಟೇರ್) | 9 | 9-22 | >22 |
| ಲಭ್ಯವಿರುವ $P_2O_5$ (ಕೆಜಿ/ಹೆಕ್ಟೇರ್) | 20 | 20-50 | >50 |
| ಅಮೋನಿಯಂ-ಅಸಿಟೇಟ್ ಕೆ (ಕೆಜಿ/ಹೆಕ್ಟೇರ್) | 120 | 120-280 | >280 |
| ಲಭ್ಯವಿರುವ $K_2O$ (ಕೆಜಿ/ಹೆಕ್ಟೇರ್) | 140 | 140-340 | >340 |

**ಕೋಷ್ಟಕ 4. ಲಘು ಪೋಷಕಾಂಶಗಳಿಗೆ ಮಣ್ಣಿನ ಪರೀಕ್ಷಾ ರೇಟಿಂಗ್ ಮಾನದಂಡ**

| ಲಘು ಪೋಷಕಾಂಶಗಳು | ವಿಮರ್ಶಾತ್ಮಕ ಮಟ್ಟ | |
|---|---|---|
| | ಬಳಸಿದ ಎಕ್ಸಟ್ರ್ಯಾಕ್ಟೆಂಟ್ | ಮೌಲ್ಯ (ಮಿ.ಗ್ರಾಂ./ಕೆಜಿ) |
| ಸತು | ಡಿಟಿಪಿಎ | 0.6 (0.4-1.2) |
| ಕಬ್ಬಿಣ | ಡಿಟಿಪಿಎ | 2.5- 4.5 |
| ಮ್ಯಾಂಗನೀಸ್ | ಡಿಟಿಪಿಎ | 2.0 |
| ತಾಮ್ರ | ಡಿಟಿಪಿಎ | 0.2 |
| ಬೋರಾನ್ | ಬಿಸಿ ನೀರು | 0.5 |
| ಮಾಲಿಬ್ಡಿನಮ್ | ಅಮೋನಿಯಂ ಆಕ್ಸಲೇಟ್ | 0.2 |

### 5.2. ಗೇರಿನಲ್ಲಿ ವಿವಿಧ ಪೋಷಕಾಂಶಗಳ ಕೊರತೆಯ ಲಕ್ಷಣಗಳು

ಪೋಷಕಾಂಶಗಳ ಕೊರತೆಯಿಂದ ಉಂಟಾದ ನ್ಯೂನ್ಯತೆಗಳನ್ನು ಗಿಡದ ಬೆಳವಣಿಗೆಯಲ್ಲಿ ಆಗುವ ಬದಲಾವಣೆಗಳ ಮೂಲಕ ಉದಾ: ಎಲೆಯ ಬಣ್ಣದಲ್ಲಿ ಬದಲಾವಣೆ, ಕುಂಟಿತ ಬೆಳವಣಿಗೆ, ರೋಗದ ಲಕ್ಷಣಗಳು,

ಇತ್ಯಾದಿಗಳ ಮೂಲಕ ಗುರುತಿಸಬಹುದಾಗಿದೆ. ಹಾಗೂ ಇದನ್ನು ಆಧಾರಿಸಿ ಮಣ್ಣಿನ ಪೋಷಕಾಂಶಗಳ ಕೊರತೆಯನ್ನು ನಿಖರತೆಗೆ ಹತ್ತಿರವಾಗಿ ನಿರ್ಣಯಿಸಲು ಇದೊಂದು ತ್ವರಿತ ಮಾರ್ಗದರ್ಶಿಯಾಗಿದೆ. ಸಾಮಾನ್ಯ ಪೋಷಕಾಂಶಗಳ ಕೊರತೆಯ ಲಕ್ಷಣಗಳನ್ನು ಮತ್ತು ಪರಿಹಾರವನ್ನು ಕ್ರಮವಾಗಿ ಕೋಷ್ಟಕ 5 ರಲ್ಲಿ ನೀಡಲಾಗಿದೆ.

**ಕೋಷ್ಟಕ 5. ಗೇರಿನಲ್ಲಿ ಪೋಷಕಾಂಶಗಳ ಕೊರತೆಯ ಲಕ್ಷಣಗಳು ಮತ್ತು ಪರಿಹಾರ**

| ಸಾರಜನಕ | ಗೇರಿನಲ್ಲಿ ಪೋಷಕಾಂಶ ಕೊರತೆಯ ಲಕ್ಷಣಗಳು |
|---|---|
| **ಕೊರತೆಯ ಲಕ್ಷಣಗಳು**<br>✦ ಕುಂಠಿತ ಬೆಳವಣಿಗೆ<br>✦ ಸಾಮ್ಯಾವಾಗಿ ಬಲಿತ/ಹಳೆಯ ಎಲೆಗಳಲ್ಲಿ ಕೊರತೆ ಕಂಡುಬರುತ್ತದೆ<br>✦ ಬಲಿತ/ಹಳೆಯ ಎಲೆಗಳು ತಿಳಿ ಹಸಿರು ಹಳದಿ ಬಣ್ಣಕ್ಕೆ ತಿರುಗುತ್ತವೆ<br>**ನಿರ್ವಹಣೆ**<br>✦ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಪ್ರದೇಶಕ್ಕೆ ಶಿಫಾರಸು ಮಾಡಿದಂತೆ ಸಾರಜನಕ ಅನ್ವಯವನ್ನು ಅನುಸರಿಸಬೇಕು<br>✦ ಒಂದು ಮರಕ್ಕೆ 10-15 ಕೆಜಿ ಕೊಟ್ಟಿಗೆ ಗೊಬ್ಬರವನ್ನು (ಎಫ್‌ವೈಎಂ) ನೀಡುವುದು<br>✦ ಕೊರತೆಯ ಲಕ್ಷಣಗಳು ಕಣ್ಮರೆಯಾಗುವವರೆಗೆ ವಾರಕ್ಕೊಮ್ಮೆ 3% ಯೂರಿಯಾವನ್ನು ಗಿಡಗಳಿಗೆ ಸಿಂಪಡಿಸುವುದು |  |
| **ರಂಜಕ** | |
| **ಕೊರತೆಯ ಲಕ್ಷಣಗಳು**<br>✦ ಕಾರ್ಬೋಹೈಡ್ರೇಟ್‌ಗಳ ಸಂಗ್ರಹದಿಂದಾಗಿ ಎಲೆಗಳ ಮೇಲೆ ಕಡು ಹಸಿರು/ನೀಲಿ ಹಸಿರು ಬಣ್ಣ ಕಂಡುಬರುವುದು<br>✦ ಮೇಲ್ಭಾಗ ಮತ್ತು ಬೇರುಗಳ ಬೆಳವಣಿಗೆಯಲ್ಲಿ ಕುಂಠಿತ<br>✦ ಕೊರತೆಯು ಮುಂದುವರಿದರೆ ಎಲೆಯು ಕಂಚಿನ ಬಣ್ಣವನ್ನು ಪಡೆಯುತ್ತದೆ. ಎಲೆಗಳ ಅಂಚಿನಲ್ಲಿ ಕೆಂಪು ಬಣ್ಣದ ತುದಿಗಳು ಕಂಡು ಬರುತ್ತವೆ.<br>**ನಿರ್ವಹಣೆ**<br>✦ ಶಿಫಾರಸ್ಸು ಮಾಡಿದಂತೆ ರಂಜಕ ಗೊಬ್ಬರದ ಅಳವಡಿಕೆ<br>✦ ರಂಜಕ ಸೊಲ್ಯುಬಿಲೈಸರ್ ಹೊಂದಿರುವ ಜೈವಿಕ ಗೊಬ್ಬರವನ್ನು ನೀಡುವುದು<br>✦ 0.5% ಫಾಸ್ಪರಿಕ್ ಆಮ್ಲವನ್ನು ಎಲೆಗಳ ಮೇಲೆ ಸಿಂಪಡಿಸುವುದು |  |

## ಪೊಟ್ಯಾಷಿಯಂ

**ಕೊರತೆಯ ಲಕ್ಷಣಗಳು**

- ಎಲೆಯ ಅಂಚುಗಳು ಹಸಿರು ಬಣ್ಣವನ್ನು ಕಳೆದು ಕೊಳ್ಳುತ್ತವೆ ಬಲಿತ/ಹಳೆಯ ಎಲೆಯ ತುದಿ ಭಾಗವು ಸುಟ್ಟಂತೆ ಮತ್ತು ಕಂದು ಬಣ್ಣಕ್ಕೆ ಬದಲಾಗುವುದು. ಗಿಡಗಳ ಬೆಳವಣಿಗೆ ಕ್ರಮೇಣ ಒಳಮುಖವಾಗಿ ಮುಂದುವರಿದು ಕುಂಠಿತಗೊಳ್ಳುತ್ತದೆ.

**ನಿರ್ವಹಣೆ**

- 1% ಪೊಟ್ಯಾಷಿಯಂ ಸಲ್ಫೇಟ್ ಅಥವಾ ಪೊಟ್ಯಾಷಿಯಂ ಕ್ಲೋರೈಡನ್ನು ಗಿಡಗಳಿಗೆ ಸಿಂಪಡಿಸುವುದು.
- ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಶಿಫಾರಸ್ಸಿನ ಪ್ರಕಾರ ಪೊಟ್ಯಾಷ್ ಗೊಬ್ಬರವನ್ನು ಅನ್ವಯಿಸುವುದು



## ಕ್ಯಾಲ್ಸಿಯಂ

**ಕೊರತೆಯ ಲಕ್ಷಣಗಳು**

- ಹೊಸ ಚಿಗುರು ಮತ್ತು ಎಳೆಯ ಎಲೆಗಳಲ್ಲಿ ಈ ಪೋಷಕಾಂಶ ಕೊರತೆಯ ಲಕ್ಷಣಗಳು ಕಂಡುಬರುತ್ತವೆ.
- ಎಳೆಯ ಎಲೆಗಳು ವಿರೂಪಗೊಂಡು, ಸಣ್ಣ ಮತ್ತು ಅಸಹಜವಾಗಿ ಹಸಿರು ಎಲೆಗಳಾಗಿ ಮಾರ್ಪಡುತ್ತದೆ.
- ಎಲೆಗಳು ಕಪ್ ಆಕಾರದಲ್ಲಿರುತ್ತದೆ ಮತ್ತು ಸುಕ್ಕುಗಟ್ಟುತ್ತವೆ.
- ಕೆಲವು ತೊಟ್ಟುಗಳ ಬೆಳವಣಿಗೆ ಸ್ಥಗಿತವಾಗು ವುದರೊಂದಿಗೆ ಟರ್ಮಿನಲ್ ಮೊಗ್ಗುಗಳು ಕ್ಷೀಣಿಸುತ್ತವೆ.
- ಟರ್ಮಿನಲ್ ಮೊಗ್ಗುಗಳು ನಿರ್ಜಲೀಕರಣಗೊಳ್ಳುತ್ತವೆ ಮತ್ತು ಕಾಂಡದ ರಚನೆಯು ದುರ್ಬಲಗೊಳ್ಳುತ್ತದೆ

**ನಿರ್ವಹಣೆ**

- ಮರಕ್ಕೆ 10-15 ಕೆಜಿ ಕೊಟ್ಟಿಗೆ ಗೊಬ್ಬರ (ಎಫ್.ವೈ.ಎಮ್) ನೀಡುವುದು
- ಪರೀಕ್ಷಾ ವರದಿಯ ಆಧಾರದ ಮೇಲೆ ಸುಣ್ಣದ ಅನ್ವಯಿಕೆ ಮಾಡುವುದು



## ಮೆಗ್ನೀಷಿಯಮ್

**ಕೊರತೆಯ ಲಕ್ಷಣಗಳು**

- ಎಲೆಗಳ ಮಧ್ಯ ಭಾಗದಲ್ಲಿ ಹಸಿರು ಬಣ್ಣವನ್ನು ಕಳೆದುಕೊಳ್ಳುತ್ತವೆ (ಮಧ್ಯಂತರ ಕ್ಲೋರೋಸಿಸ್) ಹಳೆಯ ಎಲೆಗಳ ಮೇಲೆ ಹರಿದ ಅಥವಾ ತೇಪೆ ಪರಿಣಾಮಗಳು ಕಂಡುಬರುತ್ತವೆ.
- ಬಾಧಿತ ಎಲೆಗಳು ಚಿಕ್ಕದಾಗಿರುತ್ತವೆ ಮತ್ತು ಅಂಚುಗಳು ಮೇಲಕ್ಕೆ ತಿರುಗುತ್ತವೆ

**ನಿರ್ವಹಣೆ**

- ಪರೀಕ್ಷಾ ವರದಿಯ ಆಧಾರದ ಮೇಲೆ ಡೊಲೋ ಮೈಟ್‌ನ್ನು ನೀಡುವುದು
- $MgSO_4$ (ಮೆಗ್ನಿಷಿಯಮ್ ಸಲ್ಫೇಟ್) 0.5% ನಷ್ಟು ಎಲೆಗಳಿಗೆ ಸಿಂಪಡಿಸುವುದು



## ಗಂಧಕ

**ಕೊರತೆಯ ಲಕ್ಷಣಗಳು**

- ✦ ಎಳೆಯ ಎಲೆಗಳಲ್ಲಿ ಕೊರತೆ ಕಾಣಿಸಿಕೊಳ್ಳುತ್ತದೆ.
- ✦ ಎಲೆಯ ಸಾಮಾನ್ಯ ಹಸಿರು ಬಣ್ಣವು ಮಸುಕಾಗುವುದು ಮತ್ತು ನಂತರ ಪೂರ್ತಿ ಹಸಿರು ಬಣ್ಣವನ್ನು ಕಳೆದುಕೊಳ್ಳುತ್ತವೆ.

**ನಿರ್ವಹಣೆ**

- ✦ ಒಂದು ಹೆಕ್ಟೇರಿಗೆ 10 ಕೆಜಿ ಗಂಧಕವನ್ನು ಅನ್ವಯಿಸುವುದು



## ಕಬ್ಬಿಣ

**ಕೊರತೆಯ ಲಕ್ಷಣಗಳು**

- ✦ ಎಳೆಯ ಎಲೆಗಳ ಮೇಲೆ ಮಧ್ಯಂತರ ಕ್ಲೋರೋಸಿಸ್ ಕಂಡುಬರುತ್ತದೆ.
- ✦ ಗಿಡವು ಹಸಿರು ಬಣ್ಣವನ್ನು ಕಳೆದುಕೊಂಡು ಹಳದಿ ಬಣ್ಣಕ್ಕೆ ಬದಲಾಗುತ್ತದೆ

**ನಿರ್ವಹಣೆ**

- ✦ 0.5% ಫೆರಸ್ ಸಲ್ಫೇಟ್ ಅನ್ನು ಎಲೆಗಳಿಗೆ ಸಿಂಪಡಿಸುವುದು.



## ಮ್ಯಾಂಗನೀಸ್

**ಕೊರತೆಯ ಲಕ್ಷಣಗಳು**

- ✦ ಮಧ್ಯದ ಎಲೆಗಳು / ಮೇಲಿನ ಎಲೆಗಳ ಮೇಲೆ ಮಧ್ಯಂತರ ಕ್ಲೋರೋಸಿಸ್ ಕಂಡುಬರುತ್ತದೆ.
- ✦ ಎಲೆಗಳು ಬೆಳೆದಂತೆ ನೆಕ್ರೋಟಿಕ್ ಕಲೆಗಳು ಒಗ್ಗೂಡುತ್ತವೆ ಮತ್ತು ಎಲೆಯ ನಾಳಗಳು ಹಸಿರಾಗಿರುತ್ತವೆ.
- ✦ ಎಲೆಯ ಮಧ್ಯಂತರ ಪ್ರದೇಶವು ಸಹಾ ಹಸಿರು ಬಣ್ಣವನ್ನು ಕಳೆದುಕೊಳ್ಳುತ್ತವೆ ಮತ್ತು ಎಲೆಯ ಮೇಲೆ ಒಣಗಿದಂತಹ ಚುಕ್ಕೆಗಳು ಮೂಡುತ್ತವೆ.

**ನಿರ್ವಹಣೆ**

- ✦ ಗಿಡಗಳಿಗೆ 0.5% ಮ್ಯಾಂಗನೀಸ್ ಸಲ್ಫೇಟ್ ಅನ್ನು ಎಲೆಗಳಿಗೆ ಸಿಂಪಡಿಸುವುದು



## ಸತು

**ಕೊರತೆಯ ಲಕ್ಷಣಗಳು**

- ✦ ಹೊಸ ಎಲೆಯ ನಾಳಗಳ ಮಧ್ಯೆ ಕ್ಲೋರೋಸಿಸ್ ಕಂಡುಬರುವುದು.
- ✦ ಎಲೆಗಳ ಗಾತ್ರ ಕಡಿಮೆಯಾಗುವುದು, ಎಲೆಗಳ ಮಧ್ಯದಲ್ಲಿ ಕೆಂಪು ವರ್ಣ ಕಂಡು ಬರುತ್ತದೆ ಮತ್ತು ನಂತರ ಸಂಪೂರ್ಣ ಎಲೆಯನ್ನು ಆವರಿಸುತ್ತದೆ.
- ✦ ಎಲೆಗಳ ಮಧ್ಯೆ ಅಂತರ ಕಡಿಮೆಯಾಗಿ ಪೊದೆಯ ಆಕಾರಕ್ಕೆ ಬರುವುದು.



- ಚಿಗುರುಗಳು ಕಂಚು, ನೇರಳೆ ಅಥವಾ ಕಂದು ಬಣ್ಣಕ್ಕೆ ತಿರುಗುತ್ತವೆ.
- ಎಲೆಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

**ನಿರ್ವಹಣೆ**

- ಚಿಗುರೊಡೆಯುವ, ಹೂ ಬಿಡುವ ಹಾಗೂ ಕಾಯಿ ಕಚ್ಚುವ ಸಮಯದಲ್ಲಿ 0.5% ಸತು ಸಲ್ಫೇಟ್ ಎಲೆಗಳಿಗೆ ಸಿಂಪಡಿಸಬೇಕು.

## ತಾಮ್ರ

**ಕೊರತೆಯ ಲಕ್ಷಣಗಳು**

- ಕೊರತೆಯು ಗಂಡು ಹೂವಿನ ಸಂತಾನಹೀನತೆ, ವಿಳಂಬ ಹೂಬಿಡುವಿಕೆ, ಕಿರಿಯ ಚಿಗುರು ಅಂಗಾಂಶಗಳ ಕ್ಲೋರೋಸಿಸ್, ಬಿಳಿ ತುದಿ ಮತ್ತು ಚಿಗುರು ಸಾಯಲು ಕಾರಣವಾಗುತ್ತದೆ.
- ಚಿಗುರೊಡೆಯುವ ಶಕ್ತಿ ಹೊಂದಿರುವ ರೆಂಬೆಗಳು ಸಾಯಿಸುತ್ತವೆ.
- ತಿರುಚಿದ ಸುಳಿವುಗಳೊಂದಿಗೆ ಎಲೆಗಳು ತಿಳಿ ಹಸಿರು ಬಣ್ಣಕ್ಕೆ ತಿರುಗುತ್ತವೆ.

**ನಿರ್ವಹಣೆ**

- ಚಿಗುರೊಡೆಯುವ, ಹೂಬಿಡುವ ಹಾಗೂ ಕಾಯಿ ಕಚ್ಚುವ ಸಮಯದಲ್ಲಿ 0.1% ತಾಮ್ರದ ಸಲ್ಫೇಟ್ ಸಿಂಪಡಿಸಬೇಕು.




## ಮಾಲಿಬ್ಡಿನಮ್

**ಕೊರತೆಯ ಲಕ್ಷಣಗಳು**

- ಕೊರತೆಯು ಹಳೆಯ/ಬಲಿತ ಮತ್ತು ಮಧ್ಯದ ಎಲೆಗಳಲ್ಲಿನ ರಕ್ತನಾಳಗಳ ನಡುವೆ ಕಂಡು ಬರುತ್ತದೆ.
- ಎಲೆ ಮುದುಡುವಿಕೆ ಕಂಡು ಬರುತ್ತದೆ ಹಾಗೂ ಎಲೆಯ ಅಂಚುಗಳು ಸುಟ್ಟಂತೆ ಕಾಣುತ್ತದೆ.

**ನಿರ್ವಹಣೆ**

- ಚಿಗುರೊಡೆಯುವ, ಹೂ ಬಿಡುವ ಹಾಗೂ ಕಾಯಿ ಕಚ್ಚುವ ಸಮಯದಲ್ಲಿ 0.1% ಮಾಲಿಬ್ಡಿನಮ್ ಸಿಂಪಡಿಸಬೇಕು.



| ಬೋರಾನ್ | |
|---|---|
| **ಕೊರತೆಯ ಲಕ್ಷಣಗಳು**<br>✦ ಹೊಸ ಎಲೆಗಳ ಮೇಲೆ ಹಾಗೂ ಟರ್ಮಿನಲ್ ಮೊಗ್ಗುಗಳ ಮೇಲೆ ಕೊರತೆಯ ಲಕ್ಷಣಗಳು ಮೊದಲಿಗೆ ಕಾಣಿಸಿಕೊಳ್ಳುತ್ತವೆ ಕ್ರಮೇಣ ಅವು ಹಸಿರು ಬಣ್ಣವನ್ನು ಕಳೆದುಕೊಂಡು ಸಾಯುತ್ತವೆ.<br>✦ ಎಲೆಯಿಂದ ಎಲೆಗೆ ಅಂತರ ಕಡಿಮೆಯಾಗಿ ಪೊದೆ ಆಕಾರವಾಗುತ್ತದೆ.<br>✦ ಹೊಸ ಎಲೆಗಳು ಸಹಜ ರೂಪಕ್ಕೆ ಬರದೆ ಮುದುರಿಕೊಳ್ಳುತ್ತವೆ ಹಾಗೂ ಬೆಳೆಯುವ ಚಿಗುರುಗಳು ಸಾಯುತ್ತವೆ.<br>**ನಿರ್ವಹಣೆ**<br>✦ ಚಿಗುರೊಡೆಯುವ, ಹೂ ಬಿಡುವ ಹಾಗೂ ಕಾಯಿ ಕಚ್ಚುವ ಸಮಯದಲ್ಲಿ 0.1% ಬೋರಾಕ್ಸ್ ಸಿಂಪಡಿಸಬೇಕು. |  |

## 5.3. ಎಲೆ ಮಾದರಿ, ವಿಶ್ಲೇಷಣೆ ಮತ್ತು ವ್ಯಾಖ್ಯಾನ

ಮಣ್ಣಿನ ಪೋಷಕಾಂಶಗಳನ್ನು ಪೂರೈಸುವ ಶಕ್ತಿಯನ್ನು ನಿರ್ಣಯಿಸಲು ಎಲೆಗಳ ವಿಶ್ಲೇಷಣೆ ತ್ವರಿತ ಮಾರ್ಗವಾಗಿದೆ. ಆದಾಗ್ಯೂ, ಎಲೆ ವಿಶ್ಲೇಷಣೆಯ ಉಪಯುಕ್ತತೆಯು ಎಲೆಗಳ ಮಾದರಿಯ ನಿಖರತೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ವಿಶ್ಲೇಷಣೆಗಾಗಿ ಎಲೆಗಳನ್ನು ಸಂಗ್ರಹಿಸುವಾಗ ಹೆಚ್ಚಿನ ಕಾಳಜಿಯನ್ನು ವಹಿಸಬೇಕು. ಗೇರು ಹಾಗೂ ಮುಂತಾದ ದೀರ್ಘಕಾಲಿಕ ಬೆಳೆಗಳಲ್ಲಿ ಎಲೆ ವಿಶ್ಲೇಷಣೆಯು ಬೆಳವಣಿಗೆಯ ಋತುವಿನ ಉದ್ದಕ್ಕೂ ಮಾಡಬಹುದಾಗಿದೆ. ಫಲಿತಾಂಶದ ಆಧಾರದ ಮೇಲೆ ಪೋಷಕಾಂಶಗಳನ್ನು ಗಿಡಗಳಿಗೆ ನೀಡಬಹುದು.

### 5.3.1. ಗೇರಿನಲ್ಲಿ ಸೂಕ್ತವಾದ ಎಲೆಯ ಆಯ್ಕೆ ಮತ್ತು ಮಾದರಿಯ ಸಮಯ

ಪಕ್ವವಾದ ಕೊಂಬೆಗಳ ತುದಿಯಿಂದ 4ನೇ ಎಲೆಯನ್ನು ತೊಟ್ಟುಗಳ ಸಮೇತ ಹೂ ಬಿಡುವ ಮೊದಲು ಮಾದರಿಗಾಗಿ ಸಂಗ್ರಹಿಸಬೇಕಾಗುತ್ತದೆ. ಮರದ ಎಲ್ಲಾ ದಿಕ್ಕುಗಳಿಂದ ಹಾಗೂ ವಿವಿಧ ಕೊಂಬೆಗಳಿಂದ ಸುಮಾರು 10 ಎಲೆಗಳನ್ನು ಸಂಗ್ರಹಿಸಬೇಕಾಗುತ್ತದೆ.



**ಚಿತ್ರ 6. ಗೇರಿನಲ್ಲಿ ಮಾದರಿ ಮಾಡಬೇಕಾದ ಎಲೆಯ ಸ್ಥಾನ**

### 5.3.2. ಎಲೆ ಮಾದರಿಯಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು

ಮಣ್ಣಾಗಿರುವ ಅಥವಾ ಧೂಳಿನಿಂದ ಮುಚ್ಚಿರುವ ಎಲೆಗಳನ್ನು, ಕೀಟಗಳಿಂದ ಅಥವಾ ರೋಗದಿಂದ ಹಾನಿಗೊಳಗಾದ ಎಲೆಗಳನ್ನು ಆಯ್ಕೆ ಮಾಡಬಾರದು. ಹಾಗೆಯೇ ಗಿಡಗಳು ಹೆಚ್ಚು ತೇವಾಂಶ ಅಥವಾ ತಾಪಮಾನದ ಒತ್ತಡದಲ್ಲಿರುವಾಗ ಮಾದರಿಗೆ ಬಳಸಬಾರದು.

### 5.3.3. ವಿಶ್ಲೇಷಣೆಗಾಗಿ ಸಂಗ್ರಹಿಸಿದ ಎಲೆಗಳನ್ನು ರವಾನೆ ಮಾಡುವ ವಿಧಾನ

ಕಾಗದದ ಚೀಲಗಳಲ್ಲಿ ಎಲೆಗಳನ್ನು ಅಗತ್ಯ ಮಾಹಿತಿಗಳಾದ ರೈತನ ಹೆಸರು, ವಿಳಾಸ, ಮರದ ವಯಸ್ಸು, ಸಂಗ್ರಹ ದಿನಾಂಕ ಮತ್ತು ಪರೀಕ್ಷಿಸಬೇಕಾದ ನಿಯತಾಂಕಗಳೊಂದಿಗೆ ಮಣ್ಣು ಮತ್ತು ಎಲೆ ವಿಶ್ಲೇಷಣೆ ಪ್ರಯೋಗಾಲಯಕ್ಕೆ ತಕ್ಷಣ ಕಳುಹಿಸಿ, ನಂತರದ ಸಮಯದಲ್ಲಿ ಕಳುಹಿಸಲಾಗುವ ಮಾದರಿಯನ್ನು 0.2% ಸೋಪಿನ ದ್ರಾವಣ, 0.1 N HCl ನೊಂದಿಗೆ ತೊಳೆದು ಅಂತಿಮವಾಗಿ ಎರಡು ಬಾರಿ ಭಟ್ಟಿ ಇಳಿಸಿದ ನೀರಿನಿಂದ (Distilled water) ತೊಳೆದು ನಂತರ 60°C ನಲ್ಲಿ ಒಣಗಿಸಬೇಕು.

### 5.3.4. ಸಸ್ಯ/ಎಲೆ ವಿಶ್ಲೇಷಣೆ ಫಲಿತಾಂಶಗಳ ವ್ಯಾಖ್ಯಾನ

ಪ್ರಯೋಗಾಲಯದಲ್ಲಿ ಸಸ್ಯದ ಮಾದರಿಗಳನ್ನು ಆಮ್ಲೀಯ ಜೀರ್ಣಕ್ರಿಯೆ ಮತ್ತು ಅಗತ್ಯ ಪೋಷಕಾಂಶಗಳ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಈ ಫಲಿತಾಂಶವನ್ನು ನಿರ್ಣಾಯಕ ಪೋಷಕಾಂಶಗಳ ಸಾಂದ್ರತೆಯೊಂದಿಗೆ ಹೋಲಿಸಲಾಗುತ್ತದೆ. ನಿರ್ಣಾಯಕ ಪೋಷಕಾಂಶಗಳ ಸಾಂದ್ರತೆಯು ಸಸ್ಯ ಭಾಗದಲ್ಲಿನ ಪೋಷಕಾಂಶಗಳ ಮಟ್ಟವಾಗಿದ್ದು, ಇದಕ್ಕಿಂತ ಕಡಿಮೆ ಮಟ್ಟದಲ್ಲಿ ಪೋಷಕಾಂಶಗಳು ಕಂಡುಬಂದಲ್ಲಿ ಇಳುವರಿ ತೃಪ್ತಿಕರವಾಗಿರುವುದಿಲ್ಲ, ಗೇರಿಗೆ ನಿರ್ಣಾಯಕ ಪೋಷಕಾಂಶಗಳ ಸಾಂದ್ರತೆಯ ಮೌಲ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

## 6. ಗೇರಿನಲ್ಲಿ ಪೋಷಕಾಂಶಗಳ ನಿರ್ವಹಣೆ

